www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ -10 ಸಂಚಿಕೆ - 3 ಮಾರ್ಚ್ 2014
Volume : X Issue : III March 2014

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಯೌವನಸ್ಥರ ಸ್ವರ
3. ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ
4. ವಯಸ್ಕರ ಸ್ವರ
5. ನಮ್ಮ ಕ್ರಿಸ್ತೀಯ ಜೀವಿತದಿಂದ ಇತರರಿಗೆ ಬೆಳಕಾಗಿ ಸೇವೆ ಸಲ್ಲಿಸುವುದು.
6. ಅನಾಥರ ಸ್ವರ
7. ಆರೋಗ್ಯ ಸ್ವರ
8. ಸಾಕ್ಷಿಯ ಸ್ವರ
9. ನೀತಿವಂತನ ಆಶೀರ್ವಾದಗಳು
10. ಪ್ರಾರ್ಥನಾ ಸ್ವರ
11. ಮಹಿಳೆಯರ ಸ್ವರ
12. ಸ್ಥಳೀಯ ವಿದೇಶಿ ಸುದ್ದಿಗಳು
13. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ವಂದನೆಗಳು.

ಹೊಸ ವರ್ಷದ 2ನೇ ತಿಂಗಳನ್ನು ಕಳೆದು 3ನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ವರ್ಷಗಳು, ತಿಂಗಳುಗಳು, ದಿವಸಗಳು ವೇಗವಾಗಿ ಓಡುತ್ತಾ ಇವೆ. ಸುವಾರ್ತಾ ಸೇವೆಯ ಭಾರವನ್ನು ರಕ್ಷಣೆಹೊಂದಿದ ಮಕ್ಕಳಿಗೆ ಕರ್ತನು ಕೊಟ್ಟಿದ್ದಾನೆ. ಅದನ್ನು ಎಷ್ಟು ನಂಬಿಗಸ್ತರಾಗಿ ಮಾಡುತ್ತಾ ಇದ್ದೇವೆ? ಜ್ಞಾನೋ. 28:20ರಲ್ಲಿ ನಂಬಿಗಸ್ತನು ಆಶೀರ್ವಾದಪೂರ್ಣನಾಗುವನು ಎಂದು ಕರ್ತನು ಹೇಳುತ್ತಾನೆ. ಕ್ರಿಸ್ತನ ಬರೋಣ ಹತ್ತಿರವಾಗಿದೆ. ಆದಷ್ಟು ಆತ್ಮಗಳನ್ನು ನಾವು ದೇವರ ರಾಜ್ಯಕ್ಕೆ ಸೇರಿಸಬೇಕು. ಯೆಶಾಯ ಪ್ರವಾದಿಗೆ ಅಂದು ಕರ್ತನು ನನಗೋಸ್ಕರ ಯಾರು ಹೋಗುತ್ತಾರೆಂಬುದಾಗಿ ಯೆಶಾ. 6:8 ರಲ್ಲಿ ಕೇಳಿದನು. ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು ಕಳುಹಿಸು ಅಂದೆನು. ಇಂದು ನನ್ನನ್ನು, ನಿನ್ನನ್ನು ನೋಡಿ ಕರ್ತನು ಇದೇ ಪ್ರಶೆಯನ್ನು ಕೇಳುತ್ತಿದ್ದಾನೆ? ನೀನು ಹೋಗಲು ಸಿದ್ಧನಾಗಿದ್ದೀಯೋ? ಸಿದ್ಧಳಾಗಿದ್ದೀಯೋ? ಯೆಶಾ. 52:7 ರಲ್ಲಿ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ ಎಂದು ಕರ್ತನು ಹೇಳುತ್ತಾನೆ. ನಾವು ತಡಮಾಡುವುದು ಬೇಡ, ಸಮಯವನ್ನು ವ್ಯರ್ಥ ಮಾಡುವುದು ಬೇಡ, ದೇವರಿಗಾಗಿ ದುಡಿಯೋಣ. **"ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ"** (ಎಫೆ. 5:16).

1. ದೇವರ ಸ್ವರ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಿರಿ.
2. ಈ ಮಾಸ ಪತ್ರಿಕೆಯು ಒಬ್ಬ ಸುವಾರ್ತಿಕನಿಗೆ ಸಮಾನವಾಗಿದೆ.
3. ಈ ಮಾಸ ಪತ್ರಿಕೆಯನ್ನು ಓದುವುದರ ಮೂಲಕ ನೀವು ಹೊಂದಿದ ಆಶೀರ್ವಾಧವನ್ನು ಪತ್ರದ ಮೂಲಕ ತಿಳಿಯಪಡಿಸಿರಿ. ನಾವು ಅದನ್ನು ನಮ್ಮ ಪುಸ್ತಕದಲ್ಲಿ ದೇವರ ಮಹಿಮೆಗಾಗಿ ಪ್ರಕಟಿಸುತ್ತೇವೆ.
4. ನಮ್ಮ ಸೇವೆಗಾಗಿ ಸತತವಾಗಿ ಪ್ರಾರ್ಥಿಸಿರಿ ಮತ್ತು ಯಾರು ತಮ್ಮ ಚಂದಾವನ್ನು ನವೀಕರಿಸಲಿಲ್ಲವೋ ದಯಮಾಡಿ ಚಂದಾವನ್ನು ನವೀಕರಿಸಬೇಕಾಗಿ ವಿನಂತಿಸುತ್ತೇವೆ.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

9) ಕೊರಿ. 11:13–15 ಆದರೆ ಅಂಥವರು ಸುಳ್ಳು ಅಪೋಸ್ತಲರೂ, ಮೋಸಗಾರರಾದ ಕೆಲಸದವರೂ ಕ್ರಿಸ್ತನ ಅಪೋಸ್ತಲರರಾಗಿ ಕಾಣಿಸುವುದಕ್ಕೆ ವೇಷ ಹಾಕಿಕೊಳ್ಳುವವರೂ ಆಗಿದ್ದಾರೆ. ಇದೇನೂ ಆಶ್ಚರ್ಯವಲ್ಲ. ಸೈತಾನನೂ ತಾನೇ ಪ್ರಕಾಶ ರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸುವುದಕ್ಕೆ ವೇಷಹಾಕಿಕೊಳ್ಳುವುದು ದೊಡ್ಡದಲ್ಲ, ಅವರ ಅಂತ್ಯಾವಸ್ಥೆಯು ಅವರ ಕೃತ್ಯಗಳಿಗೆ ತಕ್ಕ ಹಾಗೆಯೇ ಆಗುವುದು. ಒಬ್ಬ ಅಪೋಸ್ತಲನ ಸೇವೆಯು ಜನರ ಮಧ್ಯೆ ಸುವಾರ್ತೆ ಸಾರಿ, ಜನರನ್ನು ರಕ್ಷಣೆಗೆ ನಡೆಸಿ, ರಕ್ಷಣೆ ಹೊಂದಿದವರಿಗೆ ತಂದೆ, ಮಗ, ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಕೊಟ್ಟು ಕ್ರಿಸ್ತನ ಸಭೆಯನ್ನು ಸ್ಥಾಪಿಸುವುದಲ್ಲ, ದೇವರಿಂದ ಆರಿಸಲ್ಪಟ್ಟ ಸೇವಕರನ್ನು (ಸಭಾಪಾಲಕರನ್ನು) ನೇಮಿಸಿ ಬೇರೆ ಸಭೆ ಸ್ಥಾಪಿಸುವುದು, ಸಭೆಯ ಮೇಲ್ವಿಚಾರಣೆ ನಡೆಸುವುದೇ ಆಗಿದೆ.

ಅದೇ ರೀತಿ ಇರುವ ಸಭೆಯನ್ನು ವಿಭಾಗಿಸಿ ಜನರನ್ನು ಇರುವ ಸಭೆಯಿಂದ ಬೇರೆ ಕಡೆ ಕರೆದುಕೊಂಡು ಹೋಗಿ ಸಭೆ ನಡೆಸುವುದು ಸುಳ್ಳು ಅಪೋಸ್ತಲರ ಕೆಲಸವಾಗಿದೆ. ದೇವರಿಂದ ಅಭಿಷೇಕ ಹೊಂದಿ ದೇವರಿಂದ ಕರೆಯಲ್ಪಟ್ಟ ಅಪೋಸ್ತಲನು ಈಗಾಗಲೇ ಸ್ಥಾಪಿಸಿರುವ ಸಭೆಯನ್ನು ವಿಭಾಗಿಸುವ ಅವಶ್ಯಕತೆ ಅಪೋ. 20:29 ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು ಅವು ಹಿಂಡನ್ನು ಕನಿಕರಿಸುವುದಿಲ್ಲ. (ಯೋಹಾ. 10:12). ದೇವ ಸೇವಕರೇ, ವಿಶ್ವಾಸಿಗಳೇ ದೇವರು ನಿಮ್ಮನ್ನು ಸೇವೆಗೆ ಕರೆದಿರುವುದಾದರೆ ಯಾವ ಸೇವೆಗೆ ಎಂದು ಖಚಿತ ಪಡಿಸಿಕೊಳ್ಳಿ. ನಂತರ ಯಾವ ಸ್ಥಳ ಎಂದು ಕರ್ತನಿಂದ ಕೇಳಿ ತಿಳಿದುಕೊಳ್ಳಿ. ಆತನು ಯಾವ ಸೇವೆಗೆ ಯಾವ ಸ್ಥಳಕ್ಕೆ ನಿಮ್ಮನ್ನು ಕರೆದಿರುತ್ತಾನೋ ಅಲ್ಲಿ ನಿಮ್ಮನ್ನು ನಡೆಸಲು ನಂಬಿಗಸ್ತನಾಗಿರುತ್ತಾನೆ. ಇರುವ ಸಭೆಯಲ್ಲಿ ಬೇಧಗಳನ್ನು, ವಿಘ್ನಗಳನ್ನು ಉಂಟುಮಾಡಿ ಶಾಪವನ್ನು ನಿಮ್ಮ ಮೇಲೆ ಬರಮಾಡಿಕೊಳ್ಳಿ. **ಯಾರು ದೇವರ ಆಲಯವನ್ನು ಕೆಡಿಸುತ್ತಾನೋ ಅವನನ್ನು ದೇವರು ಕೆಡಿಸುತ್ತಾನೆ.** ಎಂದು ಕಾಣಬಹುದು. (1 ಕೊರಿ. 3:16). ಮತ್ತಾ. 16:18 **ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ ನೀನು ಪೇತ್ರನು ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು. ಕರ್ತನ ಸಭೆಯನ್ನು ನಾಶಮಾಡಲು ಸೈತಾನನಿಗೆ, ಪಾತಾಳ ಲೋಕದ ಶಕ್ತಿಗೆ ಸಾಧ್ಯವಿಲ್ಲ.** ಲೂಕ. 17:1 ರಲ್ಲಿ ಆತನು ತನ್ನ ಶಿಷ್ಯರಿಗೆ ತೊಡಕುಗಳುಬಾರದೆ ಇರಲಾರವು ಅದರೂ ಅವು ಯಾವನಿಂದ ಬರುತ್ತವೆಯೋ ಅವನ ಗತಿಯನ್ನು ಏನೂ ಹೇಳಲಿ. ನಿನ್ನನ್ನು ದೇವರು ನಿಜವಾಗಿ ಆತನು ಸೇವೆಗೆ ಕರೆದಿರುವುದಾದರೆ ಆ ಸೇವೆಮಾಡಿದ್ದೇವೆಂದು ಯೋಚಿಸುತ್ತಾರೆ. ಇಂಥ ಸೇವೆಗಳು ಬೆಳೆಯುವುದಿಲ್ಲ ಮತ್ತು ಕರ್ತನಿಂದ ಆಶೀರ್ವಾದ ಹೊಂದುವುದಿಲ್ಲ. **"ಮತ್ತೊಬ್ಬರು ಹಾಕಿದ ಅಸ್ತಿವಾರದ ಮೇಲೆ ಕಟ್ಟಬಾರದೆಂದು ಮನಸ್ಸಿನಲ್ಲಿ ನೆನಸಿ ಇತರರು ಕ್ರಿಸ್ತನ ಹೆಸರನ್ನು ತಿಳಿಸಿದ ಕಡೆಯಲ್ಲಿ ಸುವಾರ್ತೆಯನ್ನು ಪ್ರಕಟಿಸುವುದಿಲ್ಲವೆಂಬುದಾಗಿ ನಿಷ್ಕರ್ಷೆ ಮಾಡಿಕೊಂಡೆನು"** (ರೋಮ. 15:20). "ತಮ್ಮನ್ನು ತಾವೇ ಹೊಗಳಿಕೊಳ್ಳುವ ಕೆಲವರಲ್ಲಿ ನಮ್ಮನ್ನು ಸೇರಿಸಿಕೊಳ್ಳುವದಕ್ಕಾಗಲಿ ಅವರಿಗೆ ಹೋಲಿಸಿಕೊಳ್ಳುವ ದಕ್ಕಾಗಲಿ ನಮಗೆ ಧೈರ್ಯಸಾಲದು; ಅವರಂತೂ ತಮ್ಮ ತಮ್ಮೊಳಗೆ ತಮ್ಮನ್ನು ಅಳತೆಮಾಡಿಕೊಂಡು ತಮತಮಗೆ ಹೋಲಿಸಿಕೊಂಡು ವಿವೇಕವಿಲ್ಲದವರಾಗಿದ್ದಾರೆ. ನಾವಾದರೋ ಮೇರೆದಪ್ಪಿ ಹೊಗಳಿಕೊಳ್ಳದೆ ದೇವರು ನಮಗೆ ನೇಮಿಸಿದಂಥ ಮೇರೆಯೊಳಗಿದ್ದು ಹೊಗಳಿಕೊಳ್ಳುತ್ತೇವೆ, ಈ ಮೇರೆಯೊಳಗಿದ್ದು ನಿಮ್ಮ ಪರ್ಯಂತರಕ್ಕೂ ಬಂದಿದ್ದೇವೆ. ನಾವು ಕ್ರಿಸ್ತನ ಸುವಾರ್ತೆಯನ್ನು ಸಾರುತ್ತಾ ಇತರರಿಗಿಂತ ಮೊದಲು ನಿಮ್ಮ ಬಳಿಗೆ ಬಂದದರಿಂದ ನಿಮ್ಮ ಮೇಲೆ ಅಧಿಕಾರವಿಲ್ಲದವರಂತೆ ಮೇರೆಯನ್ನು ಅತಿಕ್ರಮಿಸಿದವರಲ್ಲ. ನಾವು ಮೇರೆತಪ್ಪಿ ಮತ್ತೊಬ್ಬರ ಪ್ರಯಾಸ ಫಲಗಳನ್ನು ತಕ್ಕೊಂಡು ಇವು ನಮ್ಮವು ಎಂದು ಹಿಗ್ಗುವವರಲ್ಲ; ಆದರೆ ನಿಮ್ಮ ನಂಬಿಕೆಯು ಹೆಚ್ಚಿದ ಹಾಗೆಲ್ಲಾ ನಿಮ್ಮ ಮೂಲಕ ನಮ್ಮ ಮೇರೆಯೊಳಗೆ ಇನ್ನೂ ಅಭಿವೃದ್ಧಿಹೊಂದಿ ನಿಮಗೆ ಆಚೆ ಇರುವ ಸೀಮೆಗಳಲ್ಲಿ ಸುವಾರ್ತೆಯನ್ನು ಸಾರುವೆವೆಂಬ ನಿರೀಕ್ಷೆ ನಮಗುಂಟು. ಮತ್ತೊಬ್ಬರ

ಆತನು ನಿನ್ನ ಪ್ರಾಂತದೊಳಗೆ ಸೌಭಾಗ್ಯವನ್ನುಂಟು ಮಾಡುತ್ತಾನೆ. ಶ್ರೇಷ್ಠವಾದ ಗೋದಿಯಿಂದ ನಿನ್ನನ್ನು ತೃಪ್ತಿಗೊಳಿಸುತ್ತಾನೆ. (ಕೀರ್ತ. 147:14).

ಮೇರೆಯಲ್ಲಿ ಸಿದ್ಧವಾಗಿ ನಮಗೆ ಸಿಕ್ಕಿದ ಫಲದ ಕುರಿತು ನಾವು ಹೆಚ್ಚಳಪಡುವದಿಲ್ಲ. ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ. ತನ್ನನ್ನು ತಾನೇ ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು. (2 ಕೊರಿ. 10:12–18). **"ನಿನ್ನ ಕೃತ್ಯಗಳನ್ನು ಪ್ರಯಾಸವನ್ನು ತಾಳ್ಮೆಯನ್ನು ಬಲ್ಲೆನು. ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು.** (2 ಕೊರಿ. 10:12–18). **"ನಿನ್ನ ಕೃತ್ಯಗಳನ್ನು ಪ್ರಯಾಸವನ್ನು ತಾಳ್ಮೆಯನ್ನು ಬಲ್ಲೆನು; ನೀನು ದುಷ್ಟರನ್ನು ಸಹಿಸಲಾರಿ ಅಪೋಸ್ತಲರಲ್ಲದಿದ್ದರೂ ತಮ್ಮನ್ನು ಅಪೋಸ್ತಲರೆಂದು ಹೇಳಿಕೊಳ್ಳುವವರನ್ನು ನೀನು ಪರೀಕ್ಷಿಸಿ ಅವರನ್ನು ಸುಳ್ಳುಗಾರರೆಂದು ಕಂಡುಕೊಂಡಿ** (ಪ್ರಕ. 2:2).

5) ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು. ನಿಮ್ಮಲ್ಲಿ ಭೇಧಗಳಿರಬಾರದು. ನೀವು ಒಂದೇ ಮನಸ್ಸು, ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು. ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕಂದರೆ ನನ್ನ ಸಹೋದರರೇ ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದುಬಂತು. ನಿಮ್ಮೊಳಗೆ ಪ್ರತಿಯೊಬ್ಬನು ನಾನು ಪೌಲನವನು, ಇಲ್ಲವೇ ಅಪೋಲ್ಲೋಸೋನವನು ಅಥವಾ ನಾನು ಕೇಫನವನು, ಇಲ್ಲವೇ ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ. ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೋಂಡಿರೋ ಲೋಕದಲ್ಲಿ ಅನೇಕ ಕಡೆಗಳಲ್ಲಿ ಮುಂಚಿನಿಂದಲೂ ಗುಂಪುಗಾರಿಕೆಯ ಆತ್ಮಕ್ರಿಯೆ ಮಾಡುತ್ತಿರುವುದನ್ನು ನಾವು ಕಾಣಬಹುದು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**



**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನಿನ್ನ ಗುಡಾರದ ಸ್ಥಳವನ್ನು ವಿಸ್ತರಿಸು, ನಿನ್ನ ನಿವಾಸದ ಪರದೆಗಳನ್ನು ಉದ್ದಮಾಡಿ ಗೂಟಗಳನ್ನು ಬಲಪಡಿಸು. (ಯೆಶಾ. 54:2).

# ಯೌವನಸ್ಥರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಮಾತ್ರವಲ್ಲದೇ ನಾವು ಅಪೊ 8:15, 16, 17ನೇ ವಾಕ್ಯಗಳಲ್ಲಿ ಗಮನಿಸುವಾಗ – **"ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆಮಾಡಿದರು. ಯಾಕೆಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು".** ಅನೇಕರು ಇಂದು ದೀಕ್ಷಾಸ್ನಾನವನ್ನು ಮಾಡಿಸಿಕೊಂಡು ಅದರಲ್ಲಿಯೇ ತೃಪ್ತರಾಗಿ ಬಿಡುತ್ತಾರೆ, ಆದರೆ ಪವಿತ್ರಾತ್ಮನನ್ನು ಹೊಂದಿಕೊಳ್ಳುವುದರ ಬಗ್ಗೆ ಸ್ವಲ್ಪವು ಕಾಳಜಿಯಿರುವುದಿಲ್ಲ. ಈ ಸಂಚಿಕೆಯನ್ನು ಓದುತ್ತಿರುವ ನೀವು ಒಂದು ವೇಳೆ ಇದೇ ಪರಿಸ್ಥಿತಿಯಲ್ಲಿರಬಹುದು. ಆದರೆ ದೇವರು ನಿಮ್ಮ ಕುರಿತಾಗಿ ಕಾಳಜಿ ವಹಿಸಿರುವುದರಿಂದ ಆತನು ಈ ಸಾಲುಗಳನ್ನು ನಿಮಗಾಗಿ ಇಲ್ಲಿ ಬರೆದಿದ್ದಾನೆ. ನೀವು ಈಗಲೇ ಪವಿತ್ರಾತ್ಮನನ್ನು ಅಂಗೀಕರಿಸುವುದಾದರೆ ಈಗಲೇ ಆ ಪವಿತ್ರಾತ್ಮನ ವರವನ್ನು ನೀವು ಈ ಸಂಚಿಕೆಯನ್ನು ಓದುತ್ತಿರುವಾಗಲೇ ಹೊಂದುವಿರಿ. ಪವಿತ್ರಾತ್ಮನು ಈಗ ನಿಮ್ಮನ್ನು ಹೇಗೆ ನಡೆಸುತ್ತಿದ್ದನೋ ಅದಕ್ಕೆ ಒಪ್ಪಿಸಿಕೊಡಿ ಮತ್ತು ಆತನು ಹೇಳುವ ಕಾರ್ಯವನ್ನು ಈಗಲೇ ಮಾಡಿಬಿಡಿ.

ಅಪೊ. 19:2ರಿಂದ 6ರವರೆಗೆ ನೋಡುವಾಗ ಪೌಲನು – ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು – ನೀವು ಯಾವದನ್ನು ನಂಬಿ ದೀಕ್ಷಾಸ್ನಾನಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು...

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೇ, ಅವರು ಹೊಂದಿದ ದೀಕ್ಷಾಸ್ನಾನ ಯಾರ ಹೆಸರಿನಲ್ಲಿ? ಇಂದು ಅನೇಕರು ಅನೇಕ ರೀತಿಯಾದ ದೀಕ್ಷಾಸ್ನಾನಗಳ ಕುರಿತು ಮಾತನಾಡುತ್ತಾ ತರ್ಕ ಮಾಡುತ್ತಾ ಇಲ್ಲ–ಸಲ್ಲದ ಭೋಧನೆಗಳನ್ನು, ಗಲಿ–ಬಿಲಿಗಳನ್ನು, ಗೊಂದಲಗಳನ್ನು ಹುಟ್ಟುಹಾಕುತ್ತಿದ್ದರೆಯೇ ಹೊರತು ಬೇರೆ ಯಾವ ಪ್ರಯೋಜನವು ಇಲ್ಲ. ಕೆಲವರು ಕೇವಲ ಯೆಹೋವನ ಹೆಸರಿನಲ್ಲಿ, ಇನ್ನು ಕೆಲವರು ಕೇವಲ ಯೇಸುವಿನ ಹೆಸರಿನಲ್ಲಿ, ಇನ್ನು ಕೆಲವರು ತಮಗೆ ಅನುಕೂಲವಾದ ಹೆಸರಿನಲ್ಲಿ, ಮತ್ತೆ ಕೆಲವರು ಯಾವುದೋ ಹೆಸರಿನಲ್ಲಿ... ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯನ್ನೇ ಮಾಡುತ್ತಾ ಹೋಗಬೇಕಾಗುತ್ತದೆ. ಆದರೆ ಪವಿತ್ರಾತ್ಮನು ಬರುವುದು ನಮ್ಮ ಹೆಸರಿನಲ್ಲಿಯೋ ಅಥವಾ ನಮಗೆ ಬೇಕಾದ ರೀತಿಯಲ್ಲಿಯೋ ಅಲ್ಲ. ಬದಲಾಗಿ ಯೇಸುವಿನ ಹೆಸರಿನಲ್ಲಿ. ಇಂದು ನಿನ್ನಲ್ಲಿಯೂ ಇಂಥದ್ದೇ ಗೊಂದಲವಿದ್ದರೆ, ಓದಿದ ವಾಕ್ಯವನ್ನು ನಂಬು ಮತ್ತು ಅದರಂತೆ ನಿನ್ನನ್ನು ಒಪ್ಪಿಸಿಕೊಡು. ಆಗ ಖಂಡಿತವಾಗಿ ಪವಿತ್ರಾತ್ಮನು ನಿನ್ನ ಮೇಲೆ ಬರುವನು.

ನಿಮಗೆ ನಾನು ಈಗಾಗಲೇ ಹೇಳಿದ ಹಾಗೆ, ಕೇವಲ ಹಾರಾಡುವ, ಚಿರಾಡುವ ಅಥವಾ ಒದಾಡುವ ಅನುಭವಕ್ಕಾಗಿ ಪವಿತ್ರಾತ್ಮನು ಬರುವಂಥವನಲ್ಲ. ಪರಲೋಕದಿಂದ ಒಂದು ಉದ್ದೇಶದೊಂದಿಗೆ ಆತನು ಬಂದವನಾಗಿದ್ದಾನೆ. ನಾವು ಪರಲೋಕದಿಂದ ಹೊಂದಿದ ಎಲ್ಲ ವಾಗ್ದಾನಗಳನ್ನು ಹೊಂದಲಿರುವೆವು ಎಂಬ ದೃಢನಿಶ್ಚತೆಯಾಗಿ ಪವಿತ್ರಾತ್ಮನನ್ನು ನಮ್ಮ ಖಾತ್ರಿ (Guarantee)ಯಾಗಿ ನಮಗೆ ಕೊಡಲ್ಪಟ್ಟಿದ್ದಾರೆ. ಅದನ್ನು ನಾವು ಎಫೆಸ 1:13,14ರಲ್ಲಿ ಹಾಗೂ ಪವಿತ್ರಾತ್ಮನ ಮೂಲಕ ನಾವು ದೇವರಿಗೆ ನಿವಾಸಸ್ಥಾನವಾಗಿ ಕಟ್ಟಲ್ಪಡುತ್ತಾ ಇದ್ದೇವೆ ಎಂದು ಎಫೆಸ 2:22ರಲ್ಲಿ ನೋಡಬಹುದು.

ಇಂದು ಪವಿತ್ರಾತ್ಮನ ಬಗ್ಗೆ ನಿನ್ನಲ್ಲಿ ಬೇರೆ ತಪ್ಪಾದ ಮನೋಭಾವನೆ ಅಥವಾ ತಿಳುವಳಿಕೆ ಇದ್ದಲ್ಲೀ, ಇಂದೇ ಅದಕ್ಕಾಗಿ ಪಶ್ಚಾತಾಪಪಟ್ಟು ಪವಿತ್ರಾತ್ಮನನ್ನು ಅಂಗೀಕರಿಸು. ನೀನು ಇಂದಿನಿಂದ ಪವಿತ್ರಾತ್ಮನೊಂದಿಗೆ ನಡೆಯುವಿ. ಯಾಕೆಂದರೆ ಸ್ವತ: ಯೇಸುವು ಮತ್ತಾಯ 12:31ರಲ್ಲಿ ಮನುಷ್ಯರು ಮಾಡುವ ಪ್ರತಿಯೊಂದು ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವುದು; ಆದರೆ ಪವಿತ್ರಾತ್ಮದೂಷಣೆಗೆ ಕ್ಷಮಾಪಣೆಯಿಲ್ಲ. ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲಿ ಪರದಲ್ಲಾಗಲಿ

**ನೀನು ಐಗುಪ್ತದೇಶದೊಳಗಿಂದ ಪಾರಾಗಿ ಬಂದ ಕಾಲದಲ್ಲಿ ನಾನು ತೋರಿಸಿದಂತೆ ಅದ್ಭುತಗಳನ್ನು ತೋರಿಸುವೆನು**
**(ಮೀಕ. 7:15).**

ಕ್ಷಮಿಸಲ್ಪಡುವದಿಲ್ಲ. ಒಂದು ವೇಳೆ ನಿಮಗೆ ತಿಳಿಯದೇ ಪವಿತ್ರಾತ್ಮನಿಗೆ ವಿರುದ್ಧ ಪಾಪಮಾಡಿದ್ದಲ್ಲೀ ಅಥವಾ ದೂಷಿಸಿದ್ದಲ್ಲೀ ಈಗಲೇ ಪಶ್ಚಾತ್ತಾಪದೊಂದಿಗೆ ಮಾನಸಾಂತರದೊಂದಿಗೆ ಕ್ಷಮೆಯನ್ನು ಕೇಳು. ಕರ್ತನು ಕ್ಷಮಿಸುವನು. ಮಾತ್ರವಲ್ಲದೇ, ಪವಿತ್ರಾತ್ಮನೇ ಇಂದಿನಿಂದ ನಿನ್ನ ಕೈಗಳನ್ನು ಹಿಡಿದು ಕರ್ತನ ಮಾರ್ಗದಲ್ಲಿ ನಡೆಸುವನು.

ಮುಂದಿನ ಸಂಚಿಕೆಗಳಲ್ಲಿ ಬಹಳಷ್ಟನ್ನು ಪವಿತ್ರಾತ್ಮನ ಸಹಾಯದೊಂದಿಗೆ ಕಲಿಯೋಣ. ದಯವಿಟ್ಟು ನನಗಾಗಿ, ನನ್ನ ಕುಟುಂಬಕ್ಕಾಗಿ ಮತ್ತು ಸೇವೆಗಾಗಿ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನ ಬಳಿ ಪ್ರಾರ್ಥಿಸಿರಿ. ನಿಮ್ಮ ಸಲಹೆಗಳನ್ನು ಮತ್ತು ಕರ್ತನು ನಿಮ್ಮೊಂದಿಗೆ ಮಾತನಾಡಿರುವುದನ್ನು ತಪ್ಪದೇ ನನಗೆ ಬರೆದು ಕಳುಹಿಸಿ. ನನ್ನ ಇ–ಮೇಲ್: jsma2j@gmail.com. ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

ಮುಂದುವರೆಯುವದು...

# ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗ ಹೋಮ ದ್ರವ್ಯಗಳನ್ನು ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು** (2 ಪೂರ್ವ. 7:1).

ಕರ್ತನಲ್ಲಿ ಪ್ರಿಯರೇ ನೀವು ಕರ್ತನಿಗಾಗಿ ಎದ್ದು ಪ್ರಕಾಶಿಸಬೇಕಾದರೆ ಹೆಚ್ಚಿನ ಸಮಯ ಕರ್ತನೊಂದಿಗೆ ಕಳೆಯಿರಿ. ಪ್ರಾರ್ಥಿಸುವುದರ ಮೂಲಕ ಪ್ರಕಾಶಿಸಬಹುದು. ಪ್ರಾರ್ಥನೆ ಬಹಳ ಪ್ರಾಮುಖ್ಯವಾದದು ಯಾರೆಲ್ಲಾ ಕರ್ತನೊಂದಿಗೆ ತಮ್ಮ ಜೀವಿತವನ್ನು ಸರ್ಮಪಿಸಿ ಪ್ರಾರ್ಥಿಸುತ್ತಾರೋ ಅವರ ಜೀವಿತವು, ಸೇವೆಯು, ಮುಖವು ಪ್ರಕಾಶಿಸುತ್ತದೆ, ಪ್ರಾರ್ಥಿಸುವ ಸಭೆಯು ಕೂಡಾ ಪ್ರಕಾಶಿಸುತ್ತದೆ. ಪ್ರಾರ್ಥಿಸುವ ಸಭೆಯು ಉಜ್ಜೀವನವನ್ನು ತಮ್ಮ ದೇಶದಲ್ಲಿ ಹೊತ್ತು ತರುವಂಥದಾಗಿದೆ. ಪ್ರಾರ್ಥಿಸುವ ಸಭೆಯು ದೇವ ಮಹಿಮೆಯನ್ನು ಇಳಿಯುವಂತೆ ಮಾಡುತ್ತದೆ. ಪ್ರಾರ್ಥಿಸುವ ಸಭೆಯು ಸೈತಾನನ ಕೋಟೆ ಕೊತ್ತಲುಗಳನ್ನು ಕೆಡವಿಹಾಕುವಂಥದಾಗಿದೆ, ಪ್ರಾರ್ಥಿಸುವ ಸಭೆಯು ಜೀವಿಸುವಂಥದಾಗಿದೆ.

ಒಂದು ಸಭೆಯು ಎಷ್ಟು ಚಂದವಾಗಿ ಕಟ್ಟಲ್ಪಟ್ಟಿತ್ತು ಎಂಬುದು ಮುಖ್ಯವಲ್ಲ. ಅಲ್ಲಿ ಪ್ರಾರ್ಥನೆ, ವಿಜ್ಞಾಪನೆ ಇಲ್ಲದಿದ್ದರೆ ಏನು ಪ್ರಯೋಜನ. ಕರ್ತನಾದ ಯೇಸುಕ್ರಿಸ್ತನು ಹೇಳಿದಂತಹ ಮಾತು ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದಿದೆಯಲ್ಲಾ? ಆದರೆ ನೀವು ಅದನ್ನು ಕಳ್ಳರ ಗವಿ ಮಾಡಿದ್ದೀರಿ ಎಂದು ಹೇಳಿದನು (ಮಾರ್ಕ. 11:17) ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ದೊಡ್ಡ ಸಭೆಗಳು ಮುಸ್ಲಿಂ ಮಸೀದಿಗಳಾಗಿ, ಹಿಂದೂ ದೇವಸ್ಥಾನಗಳಾಗಿ, ಹೋಟೆಲ್‌ಗಳಾಗಿ ಮಾರ್ಪಟ್ಟಿದೆ. ನಮ್ಮ ದೇಶದಲ್ಲಿ ಕೂಡಾ ಸರಿಯಾದ ಪ್ರಾರ್ಥನೆ ಇಲ್ಲದ ನಿಮಿತ್ತವಾಗಿ ಸೈತಾನನ ಆಕ್ರಮಣಕ್ಕೆ ಒಳಗಾಗಿ ಅನೇಕ ಸಭೆಗಳು ಮುಚ್ಚಲ್ಪಟ್ಟಿದೆ. ಅನೇಕ ಇಂಡಿಪೆಂಡನ್ ಸಭೆಗಳು ಸರಿಯಾದ ಆತ್ಮೀಕ ಹೊದಿಕೆ ಇಲ್ಲದ ಕಾರಣ ಹಿಂಸೆಯ ನಿಮಿತ್ತವಾಗಿ ಎಷ್ಟೋ ಸಭೆಗಳು ಮುಚ್ಚಲ್ಪಟ್ಟಿದೆ.

ಇವತ್ತು ಎಷ್ಟೋ ಆತ್ಮೀಕ ಸಭೆಗಳು ಧಾರ್ಮಿಕ ಸಭೆಗಳಾಗಿ ಮಾರ್ಪಟ್ಟಿದೆ. ಇದನ್ನು ಓದುತ್ತಿರುವ ಪ್ರಿಯರೇ, ಯಾವ ಸಭೆಯನ್ನು ದೂಷಿಸುವುದಕ್ಕಾಗಲಿ, ಕೆಳಗೆ ಹಾಕಿ ಮಾತನಾಡುವುದಕ್ಕಾಗಿ ಬರೆಯುತ್ತಿಲ್ಲ, ಸಭೆಯ ಒಂದು ಅಂಗವಾಗಿದ್ದು ನಾನು ನಿಮಗೆ ಹೇಳುವುದೇನೆಂದರೆ ಆಯಾ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಭೆಗಳಿಗಾಗಿ ಪ್ರಾರ್ಥಿಸಿ ಕಳೆದ ಹಿಂಸೆಯ ನಿಮಿತ್ತವಾಗಿ ಮುಚ್ಚಲ್ಪಟ್ಟ ಸಭೆಗಳು ಮತ್ತೆ ಅದೇ ಸ್ಥಳದಲ್ಲಿ ತೆರೆಯಲ್ಪಟ್ಟು ಕರ್ತನು ಆ ಸಭೆಯನ್ನು ವಿಶಾಲತೆಗೆ , ಅಭಿವೃದ್ಧಿಗೆ ನಡೆಸುವುದಕಕ್ಕಾಗಿ ಪ್ರಾರ್ಥಿಸಿ. ಎಲ್ಲಾ ಆತ್ಮೀಕ ಸಭೆಗಳು ಸ್ವಸ್ಥ ಸುಭೋಧನೆಯನ್ನು ಸಾರುವಂತೆ ಪ್ರಾರ್ಥಿಸಿರಿ, ಇಂಡಿ ಪೆಂಡನ್ ಸಭೆಗಳು ಆತ್ಮೀಕ ಹೊದಿಕೆಯೊಳಗೆ ಬರುವಂತೆ ಪ್ರಾರ್ಥಿಸಿರಿ.

ಪ್ರಿಯ ಸೇವಕರೇ, ಒಂದು ವೇಳೆ ನೀವು ಯಾವುದೇ ಆತ್ಮೀಕ ಹೊದಿಕೆಯಿಲ್ಲದೆ ಸೇವೆ ಮಾಡುತ್ತಿರುವುದಾದರೆ ಕ್ರಿಸ್ತ ಯೇಸುವಿನಲ್ಲಿದ್ದುಕೊಂಡು ಹೇಳುತ್ತಿದ್ದೇನೆ. ಒಂದು

**ಆತನು ಅಪ್ರಮೇಯ ಮಹಾ ಕಾರ್ಯಗಳನ್ನೂ ಅಸಂಖ್ಯವಾದ ಅದ್ಭುತಕೃತ್ಯಗಳನ್ನೂ ಮಾಡುತ್ತಾನೆ;**
**(ಯೋಬ. 5:9).**

ನಾಯಕತ್ವದ ಅಡಿಯಲ್ಲಿ ಬೆಳೆಯುವಂಥದು ಅದು ನಿಮಗೆ ಆಶೀರ್ವಾದವನ್ನು ತರುತ್ತದೆ. ಸತ್ಯವೇದದಲ್ಲಿ ಮೋಶೆಯ ನಾಯಕತ್ವದಡಿಯಲ್ಲಿ ಬೆಳೆದ ಯೆಹೋಶುವನು ಶ್ರೇಷ್ಠ ನಾಯಕನಾಗಿ ಮಾರ್ಪಟ್ಟನು, ಎಲೀಯನ ನಾಯಕತ್ವದಡಿಯಲ್ಲಿ ಬೆಳೆದ ಎಲೀಷನು ಶ್ರೇಷ್ಠ ಪ್ರವಾದಿಯಾಗಿ ಮಾರ್ಪಟ್ಟನು, ಯೇಸುಕ್ರಿಸ್ತನ ನಾಯಕತ್ವದಡಿಯಲ್ಲಿ ಬೆಳೆದ 11 ಜನ ಶಿಷ್ಯರು ಮತ್ತು ಯೂದನ ಬದಲಾಗಿ ಮತ್ತಿಯನು ಶ್ರೇಷ್ಠ ಅಪೋಸ್ತಲರಾಗಿ ಮಾರ್ಪಟ್ಟರು. ಪೌಲನ ನಾಯಕತ್ವದಡಿಯಲ್ಲಿ ಬೆಳೆದ ತಿಮೋಥೆಯನು ನಂಬಿಗಸ್ತ ನಾಯಕನಾಗಿ ಮಾರ್ಪಟ್ಟನು ಇವರೆಲ್ಲರು ಉನ್ನತವಾಗಿ ಆಶೀರ್ವಾದಿಸಲ್ಪಟ್ಟರು. ಅವರನ್ನು ಕರ್ತನು ದೇಶದ ಮುಂದಕ್ಕೆ ತಂದು ಆಶೀರ್ವಾದ ಮಾಡಿದನ್ನು ಕಾಣಬಹುದು.

ಯಾರು ನಾಯಕತ್ವದಡಿಯಲ್ಲಿ ಜೀವಿಸುತ್ತಾರೋ ಆ ನಾಯಕನಲ್ಲಿರುವ ಅಭಿಷೇಕವು ಅವರ ಮೇಲೆ ವರ್ಗಾವಣೆಯಾಗುತ್ತದೆ. ನಾವು ಲೆಕ್ಕ ಒಪ್ಪಿಸಬೇಕಾದ ಒಳ್ಳೇ ಮನೆವಾರ್ತೆಯವರಾಗಿರಬೇಕೆಂದು ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ. ಆದುದರಿಂದ ಒಂದು ಒಳ್ಳೆಯ ಆತ್ಮೀಕ ಹೊದಿಕೆಯಲ್ಲಿ ನಿಮ್ಮ ಸೇವೆಯನ್ನು ನಡೆಸುವಂಥದು ಅದು ಹೆಚ್ಚಿನ ಆಶೀರ್ವಾದವನ್ನು ಉಂಟು ಮಾಡುತ್ತದೆ. ಇವತ್ತು ಎಷ್ಟೋ ಜನರು ತಮ್ಮ ಕರೆಯುವಿಕೆ ತಿಳಿಯದೆ ಸೇವೆ ಮಾಡಿದರ ನಿಮಿತ್ತವಾಗಿ ಸೇವೆಯು ಹಾಳಾಗಿ ದೇವರ ನಾಮಕ್ಕೆ ದೂಷಣೆಯಾಗಿದೆ. ಸೇವೆ ಎಂಬುದು ಕೇವಲ ಜ್ಞಾನದಲ್ಲಿ, ಕೌಶಲ್ಯದಲ್ಲಿ, ವಾಕ್ಚತುರ್ಯದಲ್ಲಿ ಅಲ್ಲ, ಸಾಮರ್ಥ್ಯವಿದೆ ಎಂಬುದಾಗಿ ಸೇವೆ ಅಲ್ಲ, ಅದು ಕರೆಯುವಿಕೆಯಲ್ಲಿ, ಅಭಿಷೇಕದಲ್ಲಿ ನೆಲೆಗೊಂಡಿದೆ (1 ಪೇತ್ರ. 1:10).

ಸೊಲೊಮೋನನು ದೇವಾಲಯವನ್ನು ಪ್ರತಿಷ್ಠೆಪಡಿಸಿ ಪ್ರಾರ್ಥಿಸಿದಾಗ ವಾಕ್ಯವು ಸ್ಪಷ್ಟವಾಗಿ ಹೇಳುತ್ತದೆ, ಆತನು ಪ್ರಾರ್ಥಿಸುವುದನ್ನು ಮುಗಿಸಿದ ಕೂಡಲೇ ಆಕಾಶದಿಂದ ಬೆಂಕಿ ಬಿದ್ದು ಸರ್ವಾಂಗ ಹೋಮ ದ್ರವ್ಯಗಳನ್ನು ಯಜ್ಞಮಾಂಸವನ್ನು ದಹಿಸಿಬಿಟ್ಟಿತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತ್ತು. ಹೌದು ಪ್ರಾರ್ಥನೆಗೆ ಬಲ ಇದೆ. ಅದು ಅಣುಬಾಂಬುಗಿಂತಲೂ ಶಕ್ತಿಶಾಲಿಯಾಗಿದೆ. ಕರ್ತನಾದ ಯೇಸುಕ್ರಿಸ್ತನು ಜೀವನಪೂರ್ತಿ ಪ್ರಕಾಶಿಸಿದ್ದು ಆತನ ಎಡಬಿಡದ ಪ್ರಾರ್ಥನಾ ಜೀವಿತವಾಗಿತ್ತು. ಮಾರ್ಕ. 1:35, ಲೂಕ. 6:12, 9:29). ಸೀನಾಯಿ ಬೆಟ್ಟದಲ್ಲಿ ನಾಲ್ವತ್ತು ದಿನ ರಾತ್ರಿ ಹಗಲು ಪ್ರಾರ್ಥಿಸಿದ ಮೋಶೆಯ ಮುಖವು ಯಾರು ನೋಡಲಾಗದಷ್ಟು ಪ್ರಕಾಶಮಾನವಾಗಿತ್ತು. (ವಿಮೋ. 34:28–30) ಸ್ತೆಫನನ ಮುಖವು ದೇವದೂತನ ಮುಖದಂತೆ ಹಿರಿಸಭೆಯವರೆಲ್ಲರು ಕಂಡರು. (ಅ.ಕೃ. 6:15). ಪ್ರಾರ್ಥಿಸುವವನ ರಹಸ್ಯವು, ರಹಸ್ಯ ಪ್ರಾರ್ಥನೆಯಲ್ಲಿ ಅಡಗಿದೆ. ಪ್ರಾರ್ಥನೆ ಇಲ್ಲದ ಜೀವಿತ ಜಯವಿಲ್ಲದ ಜೀವಿತವಾಗಿದೆ, ಪ್ರಾರ್ಥಿಸುವವನ ಜೀವಿತದಲ್ಲಿ ಅದ್ಭುತಗಳು ಅನೇಕವಾಗಿರುತ್ತದೆ. ಪ್ರಾರ್ಥನೆಯೆಂಬುದು ಅದು ನಮ್ಮ ಹೃದಯದ ಆಕ್ರಂದನವಾಗಿರಬೇಕು. ಒಬ್ಬ ವ್ಯಾಪಾರಿಗೆ ಬಂಡವಾಳವು ಎಷ್ಟು ಅವಶ್ಯವಾಗಿದೆಯೋ ಒಬ್ಬ ವಿಶ್ವಾಸಿಗೆ ಪ್ರಾರ್ಥನೆಯು ಕೂಡಾ ಅಷ್ಟೇ ಅವಶ್ಯವಾಗಿದೆ. ಪ್ರಾರ್ಥನೆಯಿಲ್ಲದ ವ್ಯಕ್ತಿ ಈ ಪ್ರಪಂಚದಲ್ಲಿ ಇದ್ದು ಇಲ್ಲದಂತೆ. ಪ್ರಾರ್ಥನೆಯ ಕೊರತೆ ಎಲ್ಲಾದರ ಕೊರತೆಯಾಗಿದೆ. ಪ್ರಾರ್ಥನೆಯೆಂಬುದು ನಮ್ಮ ಪ್ರತಿಭೆಯನ್ನು ಸಾಮರ್ಥ್ಯವನ್ನು ತೋರಿಸುವುದಕ್ಕಾಗಿ ಅಲ್ಲ, ಬದಲಾಗಿ ದೇವರೊಂದಿಗೆ ಐಕ್ಯವಾಗಿರುವುದಕ್ಕಾಗಿ. ಪ್ರಾರ್ಥನೆಯಿಲ್ಲದೆ ಜೀವಿತ ಸೈತಾನನಿಗೆ ನಮ್ಮ ಜೀವಿತದಲ್ಲಿ ಕಾರ್ಯಮಾಡುವುದಕ್ಕೆ ತೆರೆದುಕೊಟ್ಟ ಬಾಗಿಲು. ರಹಸ್ಯ ಪ್ರಾರ್ಥನೆಯಲ್ಲಿ ಅಧಿಕವಾಗಿ ಕಳೆಯುವವನು ಬಹಿರಂಗ ಪ್ರಾರ್ಥನೆಯನ್ನು ಅಂಕಿ ಅಂಶಕ್ಕೆ ತಕ್ಕ ಹಾಗೆ ಆತ್ಮದಿಂದಲೂ, ಬುದ್ಧಿಯಿಂದಲೂ ಪ್ರಾರ್ಥಿಸುತ್ತಾನೆ. ಬಹಿರಂಗ ಪ್ರಾರ್ಥನೆ ಪ್ರಸಂಗವಾಗಿರಬಾರದು, ಬದಲಾಗಿ ನಮ್ಮ ಪ್ರಾರ್ಥನೆಯ ಮೂಲಕ ಇತರರಿಗೂ ಕೂಡಾ ಪ್ರಾರ್ಥಿಸುವುದಕ್ಕೆ ಆ ದಾಹ ಬರಬೇಕು. ಇವತ್ತು ಪ್ರಾರ್ಥನೆಯಲ್ಲಿ ಕ್ರಿಸ್ತನ ಮುಂದೆ ಅನೇಕರು ಮೊಣಕಾಲು ಹಾಕುತ್ತಾರೆ . ಆದರೆ ನಿಜವಾಗಿಯೂ ಅವರು ಕ್ರಿಸ್ತನ ಮುಂದೆ ತಗ್ಗಿಸಿಕೊಳ್ಳಲಿಲ್ಲ. ಇವತ್ತು ಅನೇಕರು ನನ್ನನ್ನು ಸಮರ್ಪಿಸುತ್ತೇನೆ ಎಂದು ಹೇಳುತ್ತಾರೆ. ಆದರೆ ದೇವರ ಮುಂದೆ ಸರಿಯಾಗಿ ಹೃದಯ ಬಿಚ್ಚಿ ಮಾತಾಡಲಿಲ್ಲ. ಅನೇಕರು ಪಟ್ಟಿಯೊಂದಿಗೆ ಹೋಗುತ್ತಾರೆ. ನಿಜವಾದ ಬೇಡಿಕೆಯ ಪಟ್ಟಿಯೊಂದಿಗೆ ಹೋಗಿರುವುದಿಲ್ಲ.. ಕಾಟಚಾರಕ್ಕೂ ಹೋಗಿ ಪ್ರಾರ್ಥಿಸಬೇಕಲ್ಲ ಎಂದು ಪ್ರಾರ್ಥಿಸುತ್ತಾರೆ ಹೊರತು ದೇವಪ್ರಸನ್ನತೆ ಅನುಭವಿಸಬೇಕು. ದೇವರನ್ನು ಕಾಣಬೇಕು, ದೇವರ ಸ್ವರ ಕೇಳಬೇಕು, ಆತನ ಚಿತ್ತವನ್ನು ನಾನು ನೇರವೇರಿಸಬೇಕು ಎಂಬ ಭಾವನೆಯಲ್ಲಿ ಅಲ್ಲ, ನಾವು ಹೋರಾಡುವವರಾಗಿ ಆತನ ಸನ್ನಿಧಿಗೆ ಹೋಗಬೇಕು. ಇದನ್ನು ಯಾಕೋಬನು ಮಾಡಿದನು.

ಯೇಸುಕ್ರಿಸ್ತನು ಶಿಲುಬೆಯಲ್ಲಿ ಈಡೀ ಮಾನವ ಕುಲದ

**ಯೆಹೋವನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಆಶ್ರಯ ದುರ್ಗವಾಗಿದ್ದಾನೆ; ತನ್ನ ಮರೆಹೊಕ್ಕವರನ್ನು ಬಲ್ಲನು**
**(ನಹೂ. 1:7).**

ಪಾಪ ಹೊತ್ತುಕೊಂಡ ನಿಮಿತ್ತವಾಗಿ ತಂದೆಯಿಂದ ಕೈ ಬಿಡಲ್ಪಟ್ಟ 3 ಗಂಟೆಯ ಸಮಯ ತಾನು ಅನುಭವಿಸಿದ ಪ್ರಾಣಸಂಕಟದ ಹಿಂಸೆಗಿಂತಲೂ ತಂದೆಯ ಅನ್ಯೋನ್ಯತೆಯಿಂದ ಕಡಿಯಲ್ಪಟ್ಟ 3 ಗಂಟೆಯ ಸಮಯ ಯೇಸುಕ್ರಿಸ್ತನಿಗೆ ಬಹಳ ವೇದನೆಯಾಯಿತ್ತು. ಇದನ್ನು ಮುಂದಾಗಿ ತಿಳಿದ ಯೇಸುಕ್ರಿಸ್ತನು ಗೆತ್ಸೇಮನೆ ತೋಟದಲ್ಲಿ ತಂದೆಯೇ ನಿನಗೆ ಇಷ್ಟವಿದ್ದರೆ ಈ ಪಾತ್ರೆಯನ್ನು ತೊಲಗಿಸು; ಹೇಗೂ ನನ್ನ ಚಿತ್ತವಲ್ಲ ನಿನ್ನ ಚಿತ್ತದಂತೆ ಆಗಲಿ. ಆ ಶಿಲುಬೆ ಹಿಂಸೆ ನೋಡಿ ಯೇಸುಕ್ರಿಸ್ತನು ಈ ಹೋರಾಟ ಬೇಡ ಎಂದು ಪ್ರಾರ್ಥಿಸಿದಲ್ಲ, ಬದಲಾಗಿ ತಂದೆಯಿಂದ ಇದುವರೆಗೂ ಇದ್ದ ನಿರಂತರವಾದ ಶ್ರೇಷ್ಠವಾದ ಸಂಬಂಧವು 3 ಗಂಟೆಗಳ ಕಾಲ ತನ್ನಿಂದ ಅಗಲುತ್ತದೆ ಎಂದು ತಿಳಿದಾಗ ಯೇಸುಕ್ರಿಸ್ತನು ಕಣ್ಣೀರಿನಿಂದ ಗೆತ್ಸೇಮನೆ ತೋಟದಲ್ಲಿ ಪ್ರಾರ್ಥಿಸಿದ್ದು.

ಪ್ರಿಯರೇ, ಇವತ್ತು ನಮ್ಮ ಕುರಿತು ಏನು ? ಕ್ರಿಸ್ತನ ಮುಂದೆ ನನ್ನ ಮೊಣಕಾಲುಗಳು ನಿಜವಾದ ಮೊಣಕಾಲುಗಳಾಗಿದೇಯೋ?, ಕ್ರಿಸ್ತನ ಮುಂದೆ ನನ್ನ ಹೃದಯವು ನಿಜವಾಗಿ ತೆರೆದ್ದಿದೆಯೋ?. ಇವತ್ತು ಯೇಸುಕ್ರಿಸ್ತನ ಪ್ರಾರ್ಥನಾ ಮಹತ್ವ ತಂದೆಯೊಂದಿಗೆ ಇರುವ ಆ ಸಂಬಂಧ ನಿಜವಾಗಿ ಅರಿತಿರುವುದಾದರೆ ನಾನು ಬಲವಾಗಿ ನಂಬುತ್ತಿದ್ದೇನೆ ನೀವು ನಿಮ್ಮ ಪ್ರಾರ್ಥನಾ ಜೀವಿತಕ್ಕೆ ಆ ತಂದೆಯೊಂದಿಗೆ ಇರುವ ಆ ಸಂಬಂಧಕ್ಕೆ ಮಹತ್ವ ಕೊಡುತ್ತೀರಿ? ಹನೋಕನು 300 ವರ್ಷಗಳ ತಂದೆಯ ಅನ್ಯೋನ್ಯತೆಯಲ್ಲಿ ನಡೆದು ನಡೆದು ದೇವರೊಂದಿಗೆ ಹಾಗೆ ಕರೆಯಲ್ಪಟ್ಟ ರೀತಿಯಲ್ಲಿ ನೀವೂ ಕೂಡಾ ಆ ಅನ್ಯೋನ್ಯತೆಯಲ್ಲಿ ನಡೆದು ನಡೆದು ಕ್ರಿಸ್ತನ ರಹಸ್ಯ ಬರೋಣದಲ್ಲಿ ಎತ್ತಲ್ಪಡಬೇಕೆಂಬುದೇ ನನ್ನ ಬಯಕೆಯಾಗಿದೆ ಕ್ರಿಸ್ತ ಯೇಸುವಿನಲ್ಲಿದ್ದುಕೊಂಡು ಹೇಳುತ್ತಿದೇನೆ. ಪ್ರಾರ್ಥನೆಗೆ ಮಹತ್ವ ಕೊಡಿರಿ ಕರ್ತನು ಹಾಗೆಯೇ ತನ್ನ ಕರದಲ್ಲಿ ನಿಮ್ಮನ್ನು ತೆಗೆದುಕೊಂಡು ಒಂದು ಪಾತ್ರೆಯು ತುಂಬಿ ಹೊರಸೂಸುವ ರೀತಿಯಲ್ಲಿ ನಿಮ್ಮ ಮೂಲಕವಾಗಿ ತನ್ನ ಮಹಿಮೆಯನ್ನು ಹರಿಯುವಮಾಡುವನು. ಬೆಟ್ಟದ ಕೆಳಗೆ ಪ್ರಾರ್ಥಿಸಿದ ಯೆಹೋಶುವನು ಮೋಶೆ ನಂತರ ಶ್ರೇಷ್ಠ ನಾಯಕನಾಗಿ ಮಾರ್ಪಟ್ಟನು. ಮೇಲಂತಸ್ತಿನಲ್ಲಿ ಪ್ರಾರ್ಥಿಸಿದ ಶಿಷ್ಯರು ಶ್ರೇಷ್ಠ ಅಪೋಸ್ತಲರಾಗಿ ಮಾರ್ಪಟ್ಟರು. ಕರ್ತನಾದ ಯೇಸುಕ್ರಿಸ್ತನು ನಿಮ್ಮನ್ನು ಕೂಡಾ ಆತನ ನಾಮದ ಮಹಿಮೆಗಾಗಿ ಪ್ರಕಾಶಿಸುವಂತೆ ಮಾಡುತ್ತಾನೆ.

ಕರ್ತನು ತಾನೇ ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

---

## ಪ್ರಾರ್ಥನಾ ಮನವಿಗಳು

1. ದೇವರ ಸ್ವರ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಿರಿ. ಈ ಪತ್ರಿಕೆಯನ್ನು ಅನೇಕ ಭಾಷೆಗಳಲ್ಲಿ ಮುದ್ರಿಸಲು ಕರ್ತನು ಜ್ಞಾನಕೊಡುವಂತೆ ಪ್ರಾರ್ಥಿಸಿರಿ.
2. ಪರೀಕ್ಷೆಯನ್ನು ಬರೆಯುವಂತ ಪ್ರತಿಯೊಂದು ಮಕ್ಕಳಿಗೆ ಕರ್ತನು ತನ್ನ ಜ್ಞಾನ, ನೆನಪಿನ ಶಕ್ತಿ, ಆರೋಗ್ಯವನ್ನು ಕೊಡುವಂತೆ ಪ್ರಾರ್ಥಿಸಿರಿ.
3. ಪ್ರತಿಯೊಂದು ಮಕ್ಕಳು ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದು ತೇರ್ಗಡೆಯಾಗುವಂತೆ ಪ್ರಾರ್ಥಿಸಿರಿ.
4. ಮುಂಬರುವ ಚುನಾವಣೆಯು ಯಾವುದೇ ಗಲಿಬಲಿ ಇಲ್ಲದೇ, ಮೋಸ ವಂಚನೆಯಿಲ್ಲದೆ ಒಳ್ಳೇ ರೀತಿ ನಡೆಯುವುದಕ್ಕಾಗಿ ಉತ್ತಮವಾದ ಸರ್ಕಾರ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸಿರಿ.
5. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ನಡೆಯುತ್ತಿರುವ ಆತ್ಯಾಚಾರಗಳು ನೀಗುವಂತೆ, ಕರ್ತನು ಪ್ರತಿಯೊಬ್ಬರಿಗೆ ರಕ್ಷಣೆಕೊಡುವಂತೆ ಪ್ರಾರ್ಥಿಸಿರಿ.
6. ಬೇಸಿಗೆ ಕಾಲದಲ್ಲಿ ಯಾವುದೇ ನೀರಿನ, ವಿದ್ಯುತ್ಚ್ಛಕ್ತಿಯ ಸಮಸ್ಯೆಗಳು ಉಂಟಾಗದಂತೆ ಪ್ರಾರ್ಥಿಸಿರಿ.
7. ನಮ್ಮ ದೇಶದಲ್ಲಿರುವ ಬಡತನ, ಬರಗಾಲ, ಭಯೋತ್ಪಾದನೆಗಳು, ಭ್ರಷ್ಟಚಾರಗಳು ನೀಗುವಂತೆ ದೇಶದಲ್ಲಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸಿರಿ.
8. ಕರ್ತನು ಪ್ರತಿಯೊಂದು ಸೇವೆಗಳನ್ನು, ಸೇವಕರನ್ನು, ಸಭೆಯ ವಿಶ್ವಾಸಿಗಳನ್ನು ಕರ್ತನು ರಕ್ಷಣೆಯಲ್ಲಿ ಕೊನೆವರೆಗೂ ದೃಢವಾಗಿ ನಿಲ್ಲಲು ಪ್ರಾರ್ಥಿಸಿರಿ.

ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಸಿದ್ಧಿಪಡಿಸಬೇಕೆಂಬ ಉದ್ದೇಶದಿಂದಲ್ಲೇ ನಿನ್ನನ್ನು ಸಾಯಿಸದೇ ಉಳಿಸಿದೆನು (ವಿಮೋ. 9:16).

# ದೇವರ ಪ್ರಶ್ನೆಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ನನ್ನ ದೇವರೇ, ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ"** (ಲೂಕ. 27:46). ಪ್ರಿಯ ದೇವ ಮಗುವೇ ನಾವು ಕ್ರಿಸ್ತನವರಾಗಿ ಜೀವಿಸುವಾಗ ಈ ಲೋಕದಲ್ಲಿ ಅನೇಕ ಕಷ್ಟ, ಹೋರಾಟಗಳಿಗೆ ಒಳಗಾಗಿ ಕುಗ್ಗಿಹೋಗುತ್ತೇವೆ. ಅದರ ನಿಮಿತ್ತ ದೇವರಿಗೆ ಅನೇಕ ಕಠಿಣವಾದ ಪ್ರಶ್ನೆಗಳನ್ನು ಹಾಕುತ್ತಾರೆ. ಕೆಲವರಂತೂ ದೇವರನ್ನು ದೂಷಿಸಿ ಪ್ರಶ್ನೆಗಳನ್ನು ಹಾಕುತ್ತಾರೆ. ಆದರೆ ಸತ್ಯವೇದದಲ್ಲಿ ಅನೇಕ ಪ್ರಶ್ನೆಗಳನ್ನು ದೇವರು ನಮಗೆ ಹಾಕಿರುವುದನ್ನು ನಾವು ಕಾಣಬಹುದು. ಅದಕ್ಕೆ ಉತ್ತರ ಕೊಡಲು ನಮ್ಮಿಂದಾಗದ ಪರಿಸ್ಥಿತಿಯು ಬಂದಿರುವ ಸನ್ನಿವೇಶಗಳು ಇದ್ದಿರಬಹುದು. ಇಂದು ಸ್ವತ: ದೇವರೇ ಕೆಲವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿರುವುದನ್ನು ನಾವು ಕೆಲವನ್ನು ಮಾತ್ರ ಧ್ಯಾನಿಸೋಣ?

1) ನೀನು ಎಲ್ಲಿರುತ್ತಿ? (where are you) ಆದಿ.3:9–10) ದೇವರು ಅದಾಮ ಹವ್ವರನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿ ಏದೇನ್ ಎಂಬ ಸುಂದರ ತೋಟದಲ್ಲಿ ತೋಟವನ್ನು ಕಾಯುವುದಕ್ಕೂ, ತೋಟವನ್ನು ವ್ಯವಸಾಯ ಮಾಡುವುದಕ್ಕಾಗಿ ಇರಿಸಿದ್ದನು. ಏದೇನ್ ಎಂದರೆ ಸಂತೋಷಪಡಿಸು ಎಂದರ್ಥ. ನಿಜವಾಗಿಯೂ ಏದೇನ್ ತೋಟ ಫಲವತ್ತಾದ, ನೋಟಕ್ಕೆ ರಮ್ಯವಾದ, ಊಟಕ್ಕೆ ಅನುಕೂಲವಾದ ಎಲ್ಲಾ ತರದ ಹಣ್ಣಿನ ಮರಗಳನ್ನು ಹೊಂದಿರುವ ಕಂಗೊಳಿಸುವ ತೋಟವಾಗಿತ್ತು. (ಅದಿ. 2:8–9). ಯಾವುದೇ ಕೊರತೆ ಇಲ್ಲದೆ ಸಂತೋಷದ ತೋಟದಲ್ಲಿ ದೇವರು ತಿನ್ನ ಬಾರದೆಂದು ಆಜ್ಞಾಪಿಸಿದ ಮಣ್ಣಿನ ಮರ ಕೂಡಾ ಇದೆ ಎಂದು ನಾವು ಕಾಣಬಹುದು. ದೇವರು ತಮ್ಮನ್ನು ತೋಟವನ್ನು ಕಾಯುವ ಮತ್ತು ವ್ಯವಸಾಯವನ್ನು ಮಾಡುವುದರ ಉದ್ದೇಶದಿಂದ ತೋಟದಲ್ಲಿಟ್ಟರೂ ಆದಾಮ ಹವ್ವರು ದೇವರ ಮುಖ್ಯ ಉದ್ದೇಶ ಮರೆತು ಚೆನ್ನಾಗಿ ತೋಟವನ್ನು ಕಾಯದ ನಿಮಿತ್ತದಿಂದಲೇ ಏನೋ ಸೈತಾನನು ತೋಟದಲ್ಲಿ ಪ್ರವೇಶಿಸಿದನು. ತೋಟದಲ್ಲಿ ಪ್ರವೇಶಿಸಿದ್ದು ಮಾತ್ರವಲ್ಲ ದೇವರ ಮಾತನ್ನು ಮೀರುವಂತೆ ಮಾಡುವಲ್ಲಿ ಸೈತಾನನು ಯಶಸ್ವಿಯಾದನು. ಮನುಷ್ಯರು ಪಾಪ ಮಾಡಿ ದೇವರ ಮಾತನ್ನು ಮೀರಿ ಆ ಪಾಪದ ನಿಮಿತ್ತವಾಗಿ ದೇವರಿಗೆ ಭಯಪಟ್ಟು ಅಡಗಿ ಕುಳಿತು ದೇವರನ್ನು ಸಂಧಿಸಲಾಗದ ಸ್ಥಿತಿಯನ್ನು ನಾವು ಕಾಣಬಹುದು. ಯಾವಾಗಲೂ ದೇವರನ್ನು ಭೇಟಿಯಾಗಿರುವ ಆದಾಮ ಇಂದು ಭಯದಿಂದ ಮರದ ಹಿಂದೆ ಅಡಗಿರುವುದನ್ನು ಕಂಡು ಸ್ವತ: ದೇವರು ಕಂಡು ಪ್ರಶ್ನಿಸುವ ಪ್ರಶ್ನೆಯೇ ಇದಾಗಿದೆ. ನೀನು ಎಲ್ಲಿರುತ್ತೀ ಅಂದರೆ ಯಾವ ಸ್ಥಿತಿಯಲ್ಲಿ ನೀನು ಇದ್ದಿ? ಹೌದು ಪ್ರಿಯರೇ ಆದಾಮ ಹವ್ವರು ದೇವರ ಮಹಿಮೆಯನ್ನು ಕಳೆದುಕೊಂಡವರಾಗಿ ತನ್ನ ಬೆತ್ತಲೆತನವನ್ನು ಪ್ರಕಟಿಸುವ ಸ್ಥಿತಿಯೆ ಇದಾಗಿತ್ತು. ಪ್ರಿಯ ದೇವ ಮಗುವೆ ನೀನು ಇದನ್ನೆಲ್ಲಾ ಓದುವಾಗ ಇದೆಲ್ಲಾ ನನಗೆ ತಿಳಿದ ವಿಷಯವೇ – ಇದನ್ನೆಲ್ಲಾ ಸೇವಕರು ತಿರುಗಿ ಯಾಕೆ? ನಮಗ್ಯಾಕೆ ಹೇಳಲು ಹೊರಟಿದ್ದಾರೆ? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು ಅಲ್ಲವೇ? ದೇವ ಮಗುವೆ ಇಲ್ಲಿದೆ ಸತ್ಯ. ಗ್ರಹಿಸುಕೋ ದೇವರು ನಮಗೆ ಕ್ರಿಸ್ತ ಯೇಸುವಿನ ಮೂಲಕ ಏದೇನ್ ಅನುಭವದಂತೆ ಯಾವ ಆಹಾರಕ್ಕೆ ಯೋಗ್ಯವಾಗಿ ದೇವರ ಕಳಂಕವಿಲ್ಲದ ರಕ್ಷಣಾನಂದವನ್ನು ಕೊಟ್ಟಿರುತ್ತಾನೆ. ಹಲ್ಲೆಲೂಯ ಮಾತ್ರವಲ್ಲದೆ ಆತ್ಮೀಕ ಜೀವವುಳ್ಳ ವಾಕ್ಯದಿಂದ ತುಂಬಿಸಿದ್ದಾನೆ. ಏದೇನ್ ತೋಟದಲ್ಲಿ ಜೀವನದಿಯು ಹರಿದು ಹೇಗೆ ತೋಟವನ್ನು ತಂಪಾಗಿಸಿತ್ತೋ ಹಾಗೆಯೇ ನಮ್ಮಲ್ಲಿ ಆನಂದ, ಬಿಡುಗಡೆಕೊಡುವ ಜೀವನದಿಯಾದ ಪವಿತ್ರಾತ್ಮನನ್ನು ಸುರಿಸಿದ್ದಾನೆ. ಮಾತ್ರವಲ್ಲದೆ ನಮ್ಮನ್ನು ಫಲಕೊಡುವ ಉದ್ದೇಶದಿಂದಲೇ ಆರಿಸಿರುತ್ತಾನೆ ಅಲ್ಲವೇ? (ಯೋಹಾ. 15:16). ರಕ್ಷನಾನಂದ, ಸಂಪ್ರದಾಯ, ಬಿಡುಗಡೆ, ಜಯದ ಜೀವಿತ ಹಾಗೂ ವರ್ಣಿಸಲಾಗದ ಪರಲೋಕದ ತೃಪ್ತಿಯ ಜೀವಿತ ಹೀಗಿರುವಾಗ ನೀನು ನಿನ್ನ ತೋಟವನ್ನು ಕಾಯದೆ ಇರುವಿಯಾದರೆ ಸೈತಾನನು ನಿನ್ನ ತೋಟದಲ್ಲಿ ಪ್ರವೇಶಿಸಿ ತೋಟವನ್ನು ಹಾಳುಮಾಡುವನು. ಎಚ್ಚರಿಕೆಯಾಗಿರು. ಹೂ ಬಿಟ್ಟಿರುವ ಇನ್ನೇನು ಫಲಕೊಡಲು ಸಿದ್ಧವಾಗುವ ತೋಟವು ಶತ್ರುವಶವಾಗಲು ಬಿಟ್ಟಿಯೇ ಎಚ್ಚರ. 'ತೋಟಗಳನ್ನು ಹಾಳುಮಾಡುವ ನರಿಗಳನ್ನು, ನರಿಮರಿಗಳನ್ನು ಹಿಡಿಯಿರಿ' (ಪರಮ. 2:15) ಏದೇನ್ ತೋಟದಲ್ಲಿ ಸೈತಾನನಿಗೆ ಅವಕಾಶ ಕೊಡುವಿಯಾದರೆ ನಿನಗೂ ದೇವರು ಕೇಳುವ ಪ್ರಶ್ನೆ "ನೀನು ಎಲ್ಲಿರುತ್ತೀ? ಒಂದು ವೇಳೆ ದೇವಮಗುವೆ ನೀನು ನಿನ್ನ ತೋಟವನ್ನು ಕಾಯದೆ ಸೈತಾನನಿಗೆ ಅವಕಾಶ ಈಗಾಗಲೇ ಕೊಟ್ಟಿರುವಿಯಾದರೆ "ನೀನು ಎಲ್ಲಿರುತ್ತೀ? ನೀನು ಯಾವ ಸ್ಥಿತಿಯಲ್ಲಿರುತ್ತಿ? ಯಾವ ಸ್ಥಿತಿಯಲ್ಲಿ ಇರಬೇಕೆಂಬ ಉದ್ದೇಶ ಎಂದು ಈ ವಾಕ್ಯದ ಮೂಲಕವಾಗಿಯಾದರೂ ಎಚ್ಚರವಾಗು' ಇಲ್ಲದಿದ್ದರೆ ದೇವರ ತೋಟದಿಂದ ಹೊರಗೆ ಹಾಕಕಲ್ಪಡುವ ಅವಕಾಶ ಬರಬಹುದು. ಹೌದು ಪ್ರಿಯರೇ, ಪಾಪವು ನಮ್ಮನ್ನು

**ವಯಸ್ಕರ ಸ್ವರ**

ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು. ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು ದೇವರಿಗೆ ಅತಿಪ್ರಿಯ. (ದಾನಿ. 9:23).

ದೇವರಿಂದ ಅಗಲಿಸುತ್ತದೆ (ಯೆಶಾ. 59:2) ಕೆಲವರು ಹೇಳಬಹುದು. ನಾನೇನು ಕೊಲೆ, ಸುಲಿಗೆ ಮಾಡಲಿಲ್ಲ/ ನಾನೇನೂ ಪಾಪಮಾಡಲಿಲ್ಲ. ದೇವ ಮಗುವೆ ನೀನು ಯಾವಾಗೆಲ್ಲಾ ದೇವರಿಗೆ ಅವಿಧೇಯನಾಗುತ್ತಿ ಅದು ಪಾಪ (1 ಸಮು. 15:22–23). ಅಪನಂಬಿಕೆಯ ಜೀವಿತವೂ ಪಾಪವಾಗಿದೆ (ಇಬ್ರಿ. 3:12). ಪ್ರಾರ್ಥಿಸದೆ ಇರುವುದು ಪಾಪ (1 ಸಮು. 12:23). ಗುಣುಗುಟ್ಟುವುದು (ಯಾಕೋ. 5:9) ಚಾಡೀ ಹೇಳುವುದು, ಅಶ್ಲೀಲ ಫಿಲಂ, ಅಶ್ಲೀಲ ಎಸ್.ಎಮ್.ಎಸ್, ಕೋಪ, ವ್ಯರ್ಥವಾಗಿ ಕಹಿ ಇಟ್ಟುಕೊಳ್ಳುವದು, ಹೊಟ್ಟೆಕಿಚ್ಚು ಸುಳ್ಳು, ವಂಚನೆ ಈ ರೀತಿ ಸೈತಾನನು ನಿನ್ನನ್ನು ಪಾಪದಲ್ಲಿ ನಿನಗೆ ತಿಳಿಯದ ರೀತಿಯಲ್ಲಿ ಬೀಳಿಸಿ ನಿನ್ನ ಏದೇನ್ ಸಂತೋಷವನ್ನು ನಷ್ಟಪಡಿಸುವನು. ಆಗ ನಾವು ಎಲ್ಲಿರುತ್ತೇವೆ ಎಂಬ ಅರಿವು ಬಾರದ ಸ್ಥಿತಿ ನಮ್ಮ ಸ್ಥಿತಿಯಾಗುವುದು. ಇಸ್ರಾಯೇಲ್ಯರನ್ನು ಫಿಲಿಷ್ಟಿಯರ ಕೈಯಿಂದ ರಕ್ಷಿಸಲು ದೇವರಿಂದ ನೇಮಿಸಲ್ಪಟ್ಟ ಸಂಸೋನನು ಆ ಉದ್ದೇಶವನ್ನು ಮರೆತು ದೇಲಿಲಾಳ ಮಡಿಲಲ್ಲಿ ಮೈಮರೆತು ಮಲಗಿದ್ದಾನೆ (ನ್ಯಾಯ. 16:19). ನಯವಾಗಿ ವಂಚಿಸಿ ಪಾಪದಲ್ಲಿ ಬೀಳಿಸುವ ಸೈತಾನನ ಬಲೆಯೊಳಗೆ ಬಿದ್ದ ಸಂಸೋನನೇ ನೀನು ಎಲ್ಲಿರುತ್ತೀ? ಪ್ರಿಯ ದೇವ ಮಗುವೆ, ನೀನು ಕರ್ತನಿಂದ ಉದ್ದೇಶವಿಲ್ಲದೆ ಕರೆಯಲ್ಪಟ್ಟು ಆರಿಸಲ್ಪಡಲಿಲ್ಲ. ಎಲ್ಲಿ ಇರಬೇಕಾದ ನೀನು ಎಲ್ಲಿರುತ್ತಿ ತಿಳಿದುಕೋ. ಇಸ್ರಾಯೇಲರನ್ನು ವೈರಿಗಳಿಂದ ಅಮ್ಮೋನಿಯರ ವಿರುದ್ಧವಾಗಿ ಯುದ್ಧಕ್ಕೆ ಕಳುಹಿಸಿ ತಾನು ಮಾತ್ರ ಅರಮನೆಯ ಉಪ್ಪರಿಗೆಯಲ್ಲಿ ಸುತ್ತಾಡುತ್ತಿದ್ದ ದಾವೀದನ ಕಣ್ಣಿಗೆ ಊರೀಯನ ಹೆಂಡತಿಯಾದ ಬಾತ್ಷೆಬೆಯು ಬಿದ್ದಳು. ದಾವೀದನು ವ್ಯಭಿಚಾರ ಪಾಪದಲ್ಲಿ ಬಿದ್ದು ಹೋದನು.. (2 ಸಮು. 11:1–2) ಎಲ್ಲಿ ಇರಬೇಕಾದ ದಾವೀದನು ಎಲ್ಲಿ ಇದ್ದಾನೆ? ಆತನಲ್ಲಿ ಇದ್ದುದರಿಂದ ಏನಾಯಿತು? ದಾವೀದನೇ ನೀನು ಎಲ್ಲಿರುತ್ತೀ?

ಎಲೀಯನ ಹಿಂದೆ ಹೋಗುತ್ತಿದ್ದ ಎಲೀಶನು ಶ್ರೇಷ್ಟ ದರ್ಶನವುಳ್ಳವನಾಗಿ ಎಲೀಯ ನಿರುವ ಆತ್ಮವರಗಳಿಗಿಂತ 2 ಪಟ್ಟು ಆತ್ಮನ ವರಗಳನ್ನು ಹೊಂದಿಕೊಂಡನು. ಆದರೆ ಎಲೀಷನ ಸೇವಕನಾದ ಗೇಹಜಿ ಆತನಿಗಿಂತ ಹೆಚ್ಚಾಗಿ ಆತ್ಮನ ವರಗಳನ್ನು ಹೊಂದಬಹುದಾದರೂ ಎಲೀಷನು ನಾಮಾನನಿಂದ ಬೇಡಾ ಎಂದು ನಿರಾಕರಿಸಿದ ಹಣ ದುಸ್ತು ಬಟ್ಟೆಗಳನ್ನು ಹೊಂದಿಕೊಳ್ಳಲು ನಾಮಾನನ ರಥದ ಹಿಂದೆ ಓಡುತ್ತಾ ಇದ್ದಾನೆ. ಯಾರ ಹಿಂದೆ ಹೋಗಬೇಕಾದ ಗೇಹಜಿ ಯಾರ ಹಿಂದೆ ಹೋಗುತ್ತಾ ಇದ್ದಾನೆ (2 ಅರಸು. 5:21). ಎಲೀಷನು ಗೇಹಜಿಗೆ ಕೇಳುವ ಪ್ರಶ್ನೆ ಎಲ್ಲಿಗೆ ಹೋಗಿ ಬಂದೆ? (2 ಅರಸು. 5:25). ಗೇಹಜಿಯೇ ನೀನು ಎಲ್ಲಿರುತ್ತೀ? ಪ್ರಿಯ ದೇವ ಮಗುವೆ ಈ ದಿವಸಗಳು ಕಡೆಯ ದಿವಸಗಳು. ಕರ್ತನ ಬರೋಣ ಹತ್ತಿರವಿರುವ ದಿನಗಳು. ನೀನು ಎಲ್ಲಿರುತ್ತೀ? ನಿನ್ನ ಸಭೆಯಲ್ಲಿ ನಿನ್ನ ಪಾತ್ರವೇನು? ಸಭೆಯ ದರ್ಶನದಲ್ಲಿ ಬರೀ ಸೇವಕರದ್ದೇ ಪಾಲು ಮಾತ್ರವೆಂದು ತಿಳಿದುಕೊಂಡು ಸುಮ್ಮನಿರುವೆಯಾ? ನಿನ್ನ ಸಭೆಯ ದರ್ಶನದಲ್ಲಿ ನಿನ್ನದೂ ಪಾಲು ಇದೆ. ಇಂದೇ ಸೇವಕರೊಂದಿಗೆ ಕೈಜೋಡಿಸುವೆಯಾ? ನೀನು ಎಲ್ಲಿರುತ್ತೀ?

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**– ಪಾ|| ರೊನಾಲ್ಡ್ ಮಚಾದೋ**

ಬೇತೇಲ್ ಚರ್ಚ್ ಕಾಮಗೆರೆ.

# ನಮ್ಮ ಕ್ರಿಸ್ತೀಯ ಜೀವಿತದಿಂದ ಇತರರಿಗೆ ಬೆಳಕಾಗಿ ಸೇವೆ ಸಲ್ಲಿಸುವುದು.

ಇಂದಿನ ಆಧುನಿಕ ಪ್ರಪಂಚದಲ್ಲಿ ಪ್ರತಿ ಮಾನವನು ಬೆಳಕನ್ನು ಬಹಳವಾಗಿ ಪ್ರೀತಿಸುತ್ತಾನೆ. ನಮ್ಮ ಇಂದಿನ ಜೀವಿತಲ್ಲಿ ನಾವು ಇತರರಿಗೆ ಬೆಳಕಾಗಿ ನಮ್ಮ ಸೇವೆಯ ಮೂಲಕ ಸೇವೆ ಸಲ್ಲಿಸವುದು ಬಹು ತ್ರಾಸದಾಯಕ. ಈ ಬೆಳಕಿನ ಕುರಿತು ಯೇಸು ಸ್ವಾಮಿಯು ತನ್ನ ಪರ್ವತ ಪ್ರಸಂಗದಲ್ಲಿ ಹೇಳಿದ ಮಾತನ್ನು ಆತನ ಶಿಷ್ಯನಾದ ಮತ್ತಾಯನು ತನ್ನ 5ನೇ ಅಧ್ಯಾಯದ16 ನೇ ವಚನದಲ್ಲಿ ತಿಳಿಸಿದಾನೆ ಅದು ಹೇಗೆಂದರೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ ಹೀಗಾದರೆ ಜನರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮತಂದೆಯನ್ನು ಕೊಂಡಾಡುವರು. ಯೇಸು ಸ್ವಾಮಿಯ ಪರ್ವತ ಪ್ರಸಂಗದ ಕುರಿತು ಅನೇಕ ಧಾರ್ಮಿಕ ಪಡಿಂತರು ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಇನ್ನು ಕೆಲವು ಪಂಡಿತರು ಯೇಸು ಸ್ವಾಮಿಯ ಪರ್ವತ ಪ್ರಸಂಗದ ಕುರಿತು ವಿಶೇಷ ಲೇಖನ ಮತ್ತು ಪುಸ್ತಕಗಳನ್ನು ರಚಿಸಿದ್ದಾರೆ. ಇಲ್ಲಿಸ್ವಾಮಿಯ ಮಾತುಗಳನ್ನು ನೋಡುವಾಗ ಎರಡು ಪದಗಳಿಗೆ ಅರ್ಥವಿದೆ. ಒಂದನೇಯದಾಗಿ ಬೆಳಕು ಮತ್ತುಎರಡನೆಯದಾಗಿ ಕ್ರಿಯೆ ಅಂದರೆ ಈ ಎರಡು ಪದಗಳು ಒಂದೇ ನಾಣ್ಯದ ಎರಡು ಮುಖಗಳು ಈ ಪ್ರಪಂಚದಲ್ಲಿ

ಇಗೋ, ನಾನು ನಿನ್ನನ್ನು ಮಸೆದ ಮೊನೆಹಲ್ಲಿನ ಹೊಸ ಹಂತಿ ಕುಂಟೆಯನ್ನಾಗಿ ಮಾಡಿದ್ದೇನೆ, ನೀನು ಬೆಟ್ಟಗಳನ್ನು ಒಕ್ಕುತ್ತಾ ಪುಡಿಪುಡಿಗೈದು ಗುಡ್ಡಗಳನ್ನು ಹೊಟ್ಟುಮಾಡುವಿ (ಯೆಶಾ. 41:15).

ದೇವರು ನಮ್ಮೆಲ್ಲರನ್ನು ಸೃಷ್ಟಿಸಿದ್ದಾಗ ನಾವು ಬೆಳಕಾಗಿ ಲೋಕದಲ್ಲಿ ಪ್ರಜ್ವಲಿಸಲು ಆಶಿಸುತ್ತೇವೆ. ಆದರೆಆತನು ನಮಗೆ ಅನುಗ್ರಹಿಸಿದ ಬೆಳಕನ್ನು ನಾವೆಲ್ಲರು ನಮ್ಮ ಕ್ರಿಯೆಗಳಿಂದ ಅಥವಾ ವಿಶೇಷ ಸೇವೆಯನ್ನು ನಾವು ದೇವರಿಗೆ ಸಲ್ಲಿಸುತ್ತೇವೆ ಎಂಬುದು ಅತೀ ಪ್ರಾಮುಖ್ಯವಾಗಿದೆ.

ನಮ್ಮೆಲ್ಲರ ಕ್ರಿಸ್ತೀಯ ಜೀವಿತದಲ್ಲಿ ಪ್ರತಿ ಮಾನವನು ಲೋಕದ ಶೋಧನೆಗೆ ಒಳಗಾಗದಂತೆ ಶ್ರೇಷ್ಠ ಹೋರಾಟ ಮಾಡಲೇ ಬೇಕಾಗಿದೆ. ಈ ಶೋಧನೆಯ ಅಧಿಪತಿಯಾದ ದುಷ್ಟ ಸೈತಾನನು ತನ್ನ ವಿವಿಧ ತಂತ್ರಗಳನ್ನು ನಮ್ಮ ಮೇಲೆ ಆಶೆಯನ್ನು ಹುಟ್ಟಿಸಿ ನಾವು ಪ್ರಕಾಶಮಯಜೀವನ ನಡೆಸಲು ಸಾಧ್ಯವಾದಂತೆ ಬಲವಾಗಿ ಪ್ರಯತ್ನಿಸುತ್ತಾನೆ. ಮಾನವಜೀತಿದಲ್ಲಿ ನಮ್ಮ ಬಲಹೀನತೆ ಗಳಿಗೆಯಲ್ಲಿ ಆತನು ನಮ್ಮನ್ನು ಮರುಳು ಗೊಳಿಸಿ ದೇವರು ನಮಗೆ ಕೊಟ್ಟ ಬೆಳಕಿನ ಮಾರ್ಗದಲ್ಲಿ ನಡೆಯದಂತೆ ಸಫಲನಾಗುತ್ತಾನೆಆದದರಿಂದ ಮಕ್ಕಳಾದ ನಾವು ನಮ್ಮತಂದೆಯಕೈಹಿಡಿದು ಮುನ್ನಡೆಯುವಂತೆ ನಾವೆಲ್ಲರು ನಮ್ಮ ದಿನದಎಲ್ಲಾ ಸಮಯದಲ್ಲಿದೇವರು ನಮ್ಮ ತಂದೆಯಂತೆ ನಮ್ಮ ಸ್ಥಿರತೆಯ ಪ್ರಾರ್ಥನೆಯೊಂದಿಗೆ ಆತನ ಹಸ್ತ ನಮಗೆ ಲಭಿಸುವಂತೆ ಈ ಮೂಲಕ ಲೌಕಿಕ ಶೋಧನೆಯಿಂದ ಪಾರಾಗಲು ಸಾಧ್ಯ. ಇಂದು ತಂದೆಯಾದ ದೇವರು ತನ್ನ ಪರಿಶುದ್ಧ ಸತ್ಯವೇದ ಮತ್ತು ಆತನು ನಮ್ಮಲ್ಲಿತನ್ನ ಪವಿತ್ರಾತ್ಮನನ್ನು ದಯಪಾಲಿಸುವದು ಮಾತ್ರವಲ್ಲದೆ ಆತನ ವಿಶೇಷ ಭಕ್ತರ ಮೂಲಕ ನಮಗೆ ಸಹಾಯ ಹಾಗೂ ಜೀವಿತದಲ್ಲಿಧೈರ್ಯವನ್ನು ನೀಡುತ್ತಾನೆ.

ತಂದೆಯಾದ ದೇವರು ತನ್ನ ಪರಿಶುದ್ಧ ಸತ್ಯವೇದದಲ್ಲಿಆತನು ಇಸ್ರಾಯೇಲ್ ಕುಲಕ್ಕೆ ಆರಿಸಿದ ಅರಸನಾದ ದಾವೀದನು ತನ್ನ ಜೀವನದಲ್ಲಿ ವಿಶೇಷ ಅನುಭವ ತಿಳಿಸಿದ್ದಾನೆ ಈ ಅರಸನು ರಚಿಸಿದ ಕೀರ್ತನೆಗಳಲ್ಲಿ 27ನೇ ಅಧ್ಯಾಯದಲ್ಲಿಕರ್ತನು ನನಗೆ ಬೆಳಕು ರಕ್ಷಕನು ಆಗಿದ್ದಾನೆ ನಾನು ಯಾರಿಗೆ ಹೆದರೇನು? ಎಂದು ಸ್ತುತಿಸುತ್ತಾನೆ. ಕುರಿಮರಿಗಳನ್ನು ಕಾಯುತ್ತಿದ್ದ ಬಾಲಕನನ್ನು ತಂದೆಯಾದ ದೇವರು ಅರಸನಾಗಿ ಮಾಡಿದ ನೆನಪನ್ನು ಆತನು ತಾನು ರಚಿಸಿದ ಕೀರ್ತನೆ 23ನೇ ಅಧ್ಯಾಯದಲ್ಲಿತಾನು ಕುರಿ ಕಾಯುವ ಕೆಲಸದಿಂದ ಅರಸನ್ನಾಗಿ ಮಾಡಿದ್ದನು ನೆನಪಿಸಿಕೊಂಡು ಈ ರೀತಿ ಸ್ತುತಿಸುತ್ತಾನೆ. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗ ನೀನು ಹತ್ತಿರ ಇರುವುದರಿಂದ ನಾನು ಎಂದಿಗೂ ಹೆದರೇನು ಇದೇ ರೀತಿ ಸತ್ಯವೇದದಲ್ಲಿ ಪೂರ್ವದ ಪ್ರವಾದಿಯಾದ ಯೆಶಾಯನು ಯೇಸು ಸ್ವಾಮಿಯ ಕುರಿತು ಕತ್ತಲಲ್ಲಿ ಸಂಚರಿಸಿ ಜನರಿಗೆ ದೊಡ್ಡ ಬೆಳಕು ಕಾಣಿಸಿತು ಮತ್ತು 60ನೇ ಅಧ್ಯಾಯದಲ್ಲಿಏಳು ಪ್ರಕಾಶಿಸು ದೇವರ ಆತ್ಮನ ತೇಜಸ್ಸು ಮೂಡುತ್ತದೆ ಎಂದು ತಿಳಿಸುತ್ತಾನೆ ಇಷ್ಟು ಮಾತ್ರವಲ್ಲದೆ ಪರಿಶುದ್ಧ ಸತ್ಯವೇದದ ಆದಿ ಭಾಗದಲ್ಲಿ ದೇವರು ಮಾಡಿದ ಪ್ರಥಮ ಕಾರ್ಯ ಬೆಳಕನ್ನು ಮೂಡಿಸಿದನು.

ನಾವು ನಮ್ಮ ಕ್ರಿಸ್ತೀಯ ಜೀವನದಲ್ಲಿ ಎರಡನೇ ಹಿನ್ನಲೆಯಲ್ಲಿ ಒಂದನ್ನು ಆಯ್ಕೆ ಮಾಡಬೇಕಾಗಿದೆ. ಒಂದನೆಯದಾಗಿ ಬೆಳಕಿನ ಜೀವನ ಮತ್ತು ಇನ್ನೊಂದು ಆಯ್ಕೆ ಈ ಲೋಕದ ಲೌಕಿಕ ಕತ್ತಲೆಯ ಜೀವನ. ಇಂದು ಕ್ರಿಸ್ತೀಯ ಜೀವನ ನಡೆಸುತ್ತೇವೆಂದು ಇತರರ ಕತ್ತಲೆಯ ಜೀವನ ಕ್ರಿಯೆಗಳು ಅಂದರೆ ಸೈತಾನನ ಕೆಲಸಗಳಾದ ಮಾಟ ವಶೀಕರಣ ಮತ್ತು ಕುಟುಂಬ ನಾಶ ಮಾಡುವದ್ದಲ್ಲದೆ ಕೇವಲ ತೋರಿಕೆಯ ಡಾಂಭಿಕ ಭಕ್ತಿಯಿಂದ ದೇವರ ನಿಜವಾದ ಕೃಪೆಯನ್ನು ನಿರ್ಲಕ್ಷಿಸಿ ನಮ್ಮ ಜೀವನವನ್ನು ನಾಶದ ಬಾಗಲಿಗೆ ತಾವೇ ಮುನ್ನಡೆಸುತ್ತಾರೆ. ಇಂದು ದೇವರು ನಮಗೆ ಅನುಗ್ರಹಿಸಿದ ಬೆಳಕಿನ ಮಾರ್ಗದಲ್ಲಿ ಮುನ್ನಡೆಯೋಣ.

**ಇಂದು ಸೇವೆಯಲ್ಲಿ ಮೂರು ವಿಧಗಳಿವೆ**

1. ಸ್ವಾರ್ಥದಿಂದ ಮಾಡುವ ಸೇವೆ.
2. ಸ್ವಹಿತಕ್ಕಾಗಿ ಮಾಡುವ ಸೇವೆ.
3. ಸ್ವಾರ್ಥವಿಲ್ಲದ ನಡೆಸುವ ನಿಜವಾದ ಬೆಳಕಿನ ಪ್ರಜ್ವಲಿಸುವ ಸೇವೆ.

ಯೇಸು ಸ್ವಾಮಿಯು ಬೋಧಿಸಿದಂತೆ ಲಾಭರಹಿತ ಸೇವೆಯು ನಿಜವಾದ ಸೇವೆ. ಮತ್ತು ನಾವು ಈ ಲೋಕದಲ್ಲಿ ನಮಗಿಂತಲೂ ನಿಕೃಷ್ಟ ಸ್ಥಿತಿಯಲ್ಲಿರುವ ನಮ್ಮ ಸಹೋದರ/ರಿಯರ ಸುಖದುಃಖಗಳಿಗೆ ಸ್ಪಂದಿಸುವುದೇ ಶ್ರೇಷ್ಠಸೇವೆ. ಇಂಥ ಮಾದರಿಯ ಸೇವೆಯು ವಿಶ್ವಾಸದ ಮನೆ ಅನಾಥಶ್ರಮದ ಮೂಲಕ ನಡೆಯುತ್ತದೆ. ಮತ್ತು ಈ ಮೂಲಕ ತಂದೆಯಾದ ದೇವರು ಅದ್ಭುತ ರೀತಿಯಲ್ಲಿ ನಮ್ಮ ಜೀವನ ಮುನ್ನಡೆಸುತ್ತಾನೆ. ಇದು ನಮ್ಮ ಸಮಾಜದಲ್ಲಿ ಪ್ರತಿ ವಿಶ್ವಾಸದ ಮನೆಯನ್ನು ದೇವರಲ್ಲಿ ಬೆಳಕಾಗಿ ಪ್ರಜ್ವಲಿಸುವ ಸೇವೆಯನ್ನು ನಡೆಸಬೇಕು. ಯೇಸು ಸ್ವಾಮಿಯು ನುಡಿದಂತೆ ನಾವು ಲೋಕಕ್ಕೆ ಬೆಳಕಾಗಿ ಪ್ರಕಾಶಿಸಿ ನಮ್ಮ ಜೀವನದಲ್ಲಿಇತರರಿಗೆ ಉಪ್ಪಿನಂತೆ ರುಚಿಕೊಡುವ ಸೇವೆಯನ್ನು ಸಲ್ಲಿಸೋಣ. ದೇವರು ನಮ್ಮೆಲ್ಲರನ್ನು ಪ್ರೀತಿಯಿಂದ ಮುನ್ನಡೆಸಲಿ.

ಲೇಖನ ಬರೆದವರು: **ಜೇಮ್ಸ್‌ಅಂಬ್ಲರ್ ಮಲ್ಪೆ.**

**ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು [ಏರುವರು}; ಓಡಿ ದಣಿಯರು, ನಡೆದು ಬಳಲರು. (ಯೆಶಾ. 40:31).**

## ಆರೋಗ್ಯ ಸ್ವರ

### ಪೀನಟ್ ಬಟರ್ (ನೆಲಗಡಲೆ ಬೆಣ್ಣೆ) :

1. ನೆಲಗಡಲೆಗಳನ್ನು ಎಣ್ಣೆಯೊಂದಿಗೆ ಅಥವಾ ಎಣ್ಣೆ ಇಲ್ಲದೆ ಹುರಿದು ನೆಲಗಡಲೆ ಬೆಣ್ಣೆಯನ್ನು ತಯಾರಿಸಬಹುದು.
2. ಇದರಲ್ಲಿ ಪ್ರೋಟೀನ್ ಸಮೃದ್ಧವಾಗಿದೆ.
3. ಇದು ಪೊಟ್ಯಾಸಿಯಂ, ಪೋಸ್ಫರಸ್ ಮತ್ತು ಮೆಗ್ನೇಸಿಯಂಗಳ ಅತ್ಯುತ್ತಮ ಮೂಲವಾಗಿದೆ.
4. ಇದರಲ್ಲಿ ಕ್ಯಾಲ್ಸಿಯಂ, ಸೋಡಿಯಂ, ಝಿಂಕ್, ಕಬ್ಬಿಣ, ಮ್ಯಾಂಗನೀಸ್ ಮತ್ತು ಸೆಲೆನಿಯಂಗಳು ಹೇರಳವಾಗಿವೆ.
5. ಇದು ಹೃದಯ ರಕ್ತನಾಳದ ತೊಂದರೆ ಇರುವ ಜನರಿಗೆ, ಅಧಿಕ ಕೊಲೆಸ್ಟ್ರಾಲ್ ಇರುವವರಿಗೆ, ರಕ್ತದಲ್ಲಿ ಅಧಿಕ ಸಕ್ಕರೆಯ ಅಂಶ ಇರುವವರಿಗೆ, ಕ್ಯಾನ್ಸರ್ ಮತ್ತು ಪಿತ್ತಕೋಶದಲ್ಲಿ ಕಲ್ಲುಗಳಿರುವ ಜನರಿಗೆ ಒಳ್ಳೆಯದು. ಇದರ 2 ಊಟದ ಚಮಚ ಪ್ರಮಾಣವು 2 ಗ್ರಾಂ ನಾರನ್ನು ಒದಗಿಸುತ್ತದೆ.
6. ಇದು ಅಧಿಕ ಕ್ಯಾಲರಿಯನ್ನು ಒದಗಿಸುತ್ತದೆ. 100 ಗ್ರಾಂ ನೆಲಗಡಲೆಯು 589 ಕ್ಯಾಲರಿಯನ್ನು ಒದಗಿಸುತ್ತದೆ.
7. ಬ್ರೆಡ್ ಸ್ಲೈಸ್ ಮೇಲೆ ಅಥವಾ ಟೋಸ್ಟ್ ರೋಟಿ, ಚಪಾತಿಗಳ ಮೇಲೆ ಹಚ್ಚಿ ಇದನ್ನು ಸೇವಿಸಬಹುದು.

### ಡಾರ್ಕ್ ಚಾಕೋಲೆಟ್‌ಗಳು:

1. ಇದು ಆಂಟಿಆಕ್ಸಿಡಾಂಟ್ ಫ್ಲೆವೊನಾಯಿಡ್‌ಗಳಿಂದ ಸಮೃದ್ಧವಾಗಿದೆ.
2. ಇದು ಒಳ್ಳೆಯ ಮತ್ತು ಕೆಟ್ಟ ಕೊಲೆಸ್ಟ್ರಾಲ್ ಅನ್ನು ನಿಯಂತ್ರಿಸುತ್ತದೆ.
3. ಇದು ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ.
4. ಇದು 136 ಕ್ಯಾಲರಿ ಮತ್ತು 8.5 ಕೊಬ್ಬನ್ನು ಒದಗಿಸುತ್ತದೆ.
5. ಡಾರ್ಕ್ ಚಾಕೋಲೆಟ್‌ನಲ್ಲಿ ಪೋಷಕಾಂಶಗಳು ಮತ್ತು ಫೈಟೋಕೆಮಿಕಲ್ಸ್‌ಗಳಿವೆ.
6. ಇದರಲ್ಲಿರುವ ಸ್ಟಿಯಾರಿಕ್ ಆಸಿಡ್ ಎಂಬ ಕೊಬ್ಬು ಇತರ ಅನೇಕ ಸ್ಯಾಚುರೇಟೆಡ್ ಕೊಬ್ಬುಗಳ ರೀತಿಯಲ್ಲಿಲ್ಲದೆ ಕೊಲೆಸ್ಟ್ರಾಲ್ ಮೇಲೆ ತಟಸ್ಥ ಪ್ರಭಾವವನ್ನು ಬೀರುತ್ತದೆ.
7. ಡಾರ್ಕ್ ಚಾಕೋಲೆಟ್‌ನಲ್ಲಿ ಇರುವುದು ಮೋನೋಸ್ಯಾಚುರೇಟೆಡ್ ಕೊಬ್ಬು ಇದು ಕೊಲೆಸ್ಟ್ರಾಲ್ ಮಟ್ಟವನ್ನು ಉತ್ತಮಗೊಳಿಸುತ್ತದೆ ಮತ್ತು ಇದು ಹೃದಯ ರಕ್ತನಾಳಗಳ ಆರೋಗ್ಯಕ್ಕೆ ಒಳ್ಳೆಯದು.
8. ಎಲ್ಲಾ ರೀತಿಯ ಡಾರ್ಕ್ ಚಾಕೋಲೆಟ್‌ಗಳಲ್ಲಿ ಕಬ್ಬಿಣ, ಮೆಗ್ನೇಸಿಯಂ, ಮ್ಯಾಂಗನೀಸ್ ಮತ್ತು ಕಾಪರ್ ಅಂಶಗಳಿವೆ.
9. ಡಾರ್ಕ್ ಚಾಕೋಲೆಟ್‌ಗಳಲ್ಲಿ ಫ್ಲೇವೊನಾಲ್ಸ್ ಗಳೆಂಬ ಫೈಟೋಕೆಮಿಕಲ್‌ಗಳಿವೆ.
10. ಫ್ಲೇವನಾಲ್ಸ್‌ಗಳು ಆಂಟಿಆಕ್ಸಿಡಾಂಟ್‌ಗಳಂತೆ ವರ್ತಿಸುತ್ತವೆ, ಇವು ಮುಕ್ತ ರಾಡಿಕಲ್‌ಗಳಿಂದ ಜೀವಕೋಶಗಳಿಗೆ ಆಗುವ ಹಾನಿಯನ್ನು ತಡೆಯುತ್ತವೆ. ಡಾರ್ಕ್ ಚಾಕೋಲೆಟ್‌ನಲ್ಲಿರುವ ಮುಖ್ಯ ಫ್ಲೆವೊನಾಲ್ ಅಂಶ ಎಂದರೆ ಎಪಿಕೇಟ್ ಚಿನ್, ಇದು ಚಹಾ ಮತ್ತು ಕೆಂಪು ವೈನ್‌ನಲ್ಲಿಯೂ ಇರುತ್ತದೆ.

### ಶೇಂಗಾ ಖೀರ್

ಹುರಿದು ಸಿಪ್ಪೆ ತೆಗದು ಅರ್ಧ ಗಂಟೆ ನೆನೆಸಿದ 100 ಗ್ರಾಂ ಶೇಂಗಾ ಬೀಜ. 6 ರಿಂದ 8 ನೆನೆಸಿ ಸಿಪ್ಪೆ ತೆಗೆದ ಬಾದಾಮಿ. ಶೇಂಗಾ ಮತ್ತು ಬಾದಾಮಿಯನ್ನು ಸ್ವಲ್ಪ ಹಾಲು ಹಾಕಿ ಪೇಸ್ಟ್‌ಮಾಡಿಕೊಳ್ಳುವುದು. ಒಂದು ಲೀಟರ್ ಹಾಲನ್ನು ಅರ್ಧ ಲೀಟರ್ ಆಗುವವರೆಗೆ ಕಾಯಿಸಿ ಸಕ್ಕರೆ ಸೇರಿಸಿ. ಅದಕ್ಕೆ ತಯಾರಿಸಿಟ್ಟು ಕೊಂಡ ಶೇಂಗಾ, ಬಾದಾಮಿ ಪೇಸ್ಟ್ ಸೇರಿಸುವುದು. ನಂತರ ಈ ಮಿಶ್ರಣಕ್ಕೆ 50 ಗ್ರಾಂ ಹುರಿದ ಖೋವಾ ಸೇರಿಸಿ ಹತ್ತು ನಿಮಿಷ ಕಡಿಮೆ ಹುರಿಯಲ್ಲಿ ಕುದಿಸಿ ಕೆಳಗಿಳಿಸಬೇಕು. ಇದಕ್ಕೆ ಹುರಿದ ಗೋಡಂಬಿ, ದ್ರಾಕ್ಷಿ, ಏಲಕ್ಕಿ ಪುಡಿ ಸೇರಿಸಿ ಸರ್ವ್ ಮಾಡುವುದು. ಬೇಸಿಗೆಯಲ್ಲಿ ಇದನ್ನು ದೇಹವು ತಂಪಾಗಿಸುವುದಕ್ಕೆ ಸೇವಿಸಬಹುದು. ಚಳಿಗಾಲ, ಮಳೆಗಾಲದ ಸಂಜೆಗಳಲ್ಲಿ ಶೇಂಗಾ ಖೀರ್ ಸೇವಿಸುತ್ತಿದ್ದರೆ ತಾಜಾತನ ಮೂಡುತ್ತದೆ. ಶೇಂಗಾ, ಬದಾಮಿ, ಚಳಿಗಾಲದಲ್ಲಿ ಮುಖ ಮತ್ತು ದೇಹದ ಚರ್ಮ ಸುಕ್ಕಾಗದಂತೆ ತಡೆಯುತ್ತವೆ. ಚೆನ್ನಾಗಿ ಕಾಯಿಸಿದ ಹಾಲು, ಖೋವಾ ಚಳಿಗೆ ದೇಹದ ಮಾಯಿಶ್ಚರೈಸರ್ ಹಾಳಾಗದಂತೆ ತಡೆಗಟ್ಟುತ್ತದೆ. ಮಕ್ಕಳು ದಿಢೀರ್ ಅಂತ ಸ್ವೀಟ್ ಕೇಳಿದರೆ ಮುಕ್ಕಾಲು ಗಂಟೆಯಲ್ಲಿ ತಯಾರಿಸಬಹುದು.

– ಸಂಗ್ರಹ.

ನಿನ್ನ ಸಂತಾನದವರಲ್ಲಿ ನನ್ನ ಆತ್ಮವನ್ನು, ನಿನ್ನ ಸಂತತಿಯವರ ಮೇಲೆ
ನನ್ನ ಆಶೀರ್ವಾದವನ್ನು, ಸುರಿಸುವೆನು (ಯೆಶಾ. 44:3).

# ಸಾಕ್ಷಿಯ ಸ್ವರ

* ನನಗೆ 2 ವರ್ಷದಿಂದ ಸೊಂಟ ಮತ್ತು ಕಾಲು ನೋವು ಇತ್ತು. ಕೂತುಕೊಳ್ಳಲು ಆಗುತ್ತಿರಲಿಲ್ಲ. ಆದರೆ ಈ 2ನೇ ಕೆರೀತ್ ಕೂಟದಲ್ಲಿ ಕರ್ತನು ಸಂಪೂರ್ಣ ಬಿಡುಗಡೆ ಕೊಟ್ಟಿದ್ದಾನೆ ಕರ್ತನ ನಾಮಕ್ಕೆ ಸ್ತೋತ್ರ.

–**ಸ್ಟೇಲ್ಲಾ, ಲಸ್ರಾದೋ,** (ಬಂಟ್ವಾಳ).

* ನಾನು ಅನ್ಯಭಾಷೆಯ ವರ ಮತ್ತು ಅನ್ಯಭಾಷೆಯಲ್ಲಿ ಹಾಡುತ್ತಿದ್ದೆ ಆದರೆ ಇನ್ನೂ ನನಗೆ ಆತ್ಮೀಕ ಜೀವಿತದಲ್ಲಿ ಬೆಳೆಯಬೇಕು ಎಂದು ಆಸೆ ಇತ್ತು ಆದರೆ ದೇವರು ಈ 2ನೇ ಕೆರೀತ್ ಕೂಟದಲ್ಲಿ ಇನ್ನು ಹೆಚ್ಚಾಗಿ ಅನ್ಯಭಾಷೆಯಿಂದ ತುಂಬಿಸಿದ್ದಾರೆ ಅದಕ್ಕಾಗಿ ದೇವರ ನಾಮಕ್ಕೆ ಸ್ತೋತ್ರವಾಗಲಿ.

– **ಅನಿತಾ ಸೋನ್ಸ್,** ಕೇರಳ.

* ನಾನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ ಈ ರೀತಿಯಲ್ಲಿ ಜೀವಿಸುತ್ತಿದ್ದೆ. ಆದರೆ ದೇವರು 1ನೇ ಕೆರೀತ್ ಕೂಟದಲ್ಲಿ ನನ್ನನ್ನು ಮುಟ್ಟಿ ನೂತನ ಸೃಷ್ಟಿಯಾಗಿ ನನ್ನನ್ನು ಮಾಡಿದನು ಮತ್ತು ಬೆಂಕಿಯಿಂದ ಅಭಿಷೇಕಿಸಿದ್ದಾನೆ ದೇವರ ನಾಮಕ್ಕೆ ಸ್ತೋತ್ರವಾಗಲಿ.

– **ದಿನೇಶ್**(ಬೆರ್ಕಳ).

* ನಾನು ಆತ್ಮೀಕ ಜೀವಿತದಲ್ಲಿ ಬಿದ್ದು ಹೋಗಿ ಲೋಕದ ಪ್ರಕಾರ ಜೀವಿಸುತ್ತಿದ್ದೆ ಈ 1ನೇ ಕೆರೀತ್ ಕೂಟದಲ್ಲಿ ದೇವರು ನನ್ನನ್ನು ಮುಟ್ಟಿ ಹೊಸ ಸೃಷ್ಟಿಯಾಗಿ ಮಾಡಿದ್ದಾನೆ ಮತ್ತು ಇಲ್ಲಿ ಬರುವ 3ದಿನ ಮೊದಲು ಕೆಲಸ ಮಾಡುವುದಾದರೆ ನಿನ್ನ ಕೆಲಸ ಮಾಡುತ್ತೇನೆ ಅಂತ ಹೇಳುತ್ತಿದ್ದೆ. ಆದರೆ ಈ 1ನೇ ಕೂಟದಲ್ಲಿ ದೇವರು ಅದನ್ನು ನೆರವೇರಿಸಿದನು. ದೇವರು ಮಾಡಿದ ಉಪಕಾರಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

– **ಬಾಬು,** (ಮಡಂತ್ಯಾರು).

* 1ನೇ ಕೆರೀತ್ ಕೂಟದಲ್ಲಿ ಕರ್ತನು ನನಗೆ ಹೊಸ ಅನ್ಯಭಾಷೆಯ ವರದಿಂದ ನನ್ನನ್ನು ತುಂಬಿಸಿದ್ದಾರೆ ಅದಕ್ಕಾಗಿ ಕರ್ತನಿಗೆ ಸ್ತೋತ್ರಸಲ್ಲಿಸುತ್ತೇನೆ.

– **ಕುಸುಮ,** (ಮಡಂತ್ಯಾರು).

* ನನ್ನ ಜೀವಿತದಲ್ಲಿ ಸಮಾಧಾನ ಇರಲಿಲ್ಲ. ಈ 1ನೇ ಕೆರೀತ್ ಕೂಟದಲ್ಲಿ ದೇವರು ನನಗೆ ಸಮಾಧಾನವನ್ನು ಕೊಟ್ಟು ನಡೆಸಿದ್ದಾರೆ ಅದಕ್ಕಾಗಿ ಕರ್ತನಿಗೆ ಸ್ತೋತ್ರ ಸಲ್ಲಿಸುತ್ತೇನೆ.

– **ಚಂದ್ರಮ್ಮ,** (ಮಂಚಕಲ್).

* ನಾನು ಈ 1ನೇ ಕೆರೀತ್ ಕೂಟಕ್ಕೆ ಬರುವಾಗ ಕೈ ನೋವು ಮತ್ತು ಮೈ ನೋವು ತುಂಬಾ ಇತ್ತು. ದೇವರು ಈ ಕೂಟದಲ್ಲಿ ಸಂಪೂರ್ಣವಾಗಿ ಗುಣಪಡಿಸಿದ್ದಾರೆ ಮತ್ತು ಅನ್ಯಭಾಷೆಯ ವರದಿಂದ ನನ್ನನ್ನು ತುಂಬಿಸಿದ್ದಾರೆ. ಅದಕ್ಕಾಗಿ ದೇವರಿಗೆ ಸ್ತೋತ್ರ.ಸಲ್ಲಿಸುತ್ತೇನೆ.

– **ಕಾವ್ಯ** (ಮುಂಡಗೋಡು).

* ನನಗೆ ಎದೆನೋವು ಇತ್ತು. ಈ 1ನೇ ಕೆರೀತ್ ಕೂಟದಲ್ಲಿ ದೇವರು ನನ್ನನ್ನು ಮುಟ್ಟಿ ಸಂಪೂರ್ಣವಾಗಿ ಗುಣಪಡಿಸಿದ್ದಾರೆ ಮತ್ತು ಮೊದಲ ಬಾರಿಗೆ ಅನ್ಯಭಾಷೆಯ ವರದಿಂದ ತುಂಬಿಸಿದ್ದಾರೆ.

– **ಅನೀಷಾ,** (ಸುಭಾಸ್‌ನಗರ).

* ನನ್ನ ಗಂಡ ಮತ್ತು ಮಗಳನ್ನು ಈ 1ನೇ ಕೆರೀತ್ ಕೂಟಕ್ಕೆ ಬಿಟ್ಟು ಹೋಗಲು ಬಂದಿದೆ ಆದರೆ ನನಗೆ ಕೆರೀತ್‌ನಲ್ಲಿ ಭಾಗವಹಿಸಲು ಸ್ವಲ್ಪವೂ ಮನಸ್ಸಿರಲಿಲ್ಲ. ದೇವರು ನನ್ನನ್ನು ಆತನ ವಾಕ್ಯದ ಮೂಲಕ ಮತ್ತು ಅಭಿಷೇಕದಿಂದ ತುಂಬಿಸಿದ್ದಾನೆ. ಮತ್ತು ನನ್ನ ಗಂಡನ ಸೊಂಟ ನೋವಿನಿಂದ ಸಂಪೂರ್ಣ ಗುಣಕೊಟ್ಟಿದ್ದಾರೆ ಮತ್ತು ಸಂತೋಷ, ಸಮಾಧಾನ ಸಿಕ್ಕಿದೆ.

– **ಕಲ್ಪನಾ ಭಟ್** (ಬೆಂಗಳೂರು).

* ನಾನು ಮೂರು ವರ್ಷದ ಹಿಂದೆ ಕಬ್ಬಡಿ ಆಡುವಾಗ ಕಾಲು ಟ್ವಿಸ್ಟ್ ಆಗಿ ನೋವು ಇತ್ತು. ಮೂರು ವರ್ಷಗಳ ಕಾಲನೋವು ಅನುಭವಿಸಿದೆ ಆದರೆ ಈ 1ನೇ ಕೆರೀತ್ ಕೂಟದಲ್ಲಿ ಕರ್ತನು ನನ್ನನ್ನು ಮುಟ್ಟಿ ಸಂಪೂರ್ಣವಾಗಿ ಗುಣಪಡಿಸಿದ್ದಾನೆ.

– **ಅಣ್ಣಿ** (ಮಡಂತ್ಯಾರು).

ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವದೇ ಇಲ್ಲ, ಕೈಬಿಡುವದಿಲ್ಲ; ಅಂಜಬೇಡ, ಧೈರ್ಯದಿಂದಿರು. (ಧರ್ಮೋ. 31:8).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

5) ನಿರ್ದೋಷಿಯ ಧರ್ಮವು ಅವನ ಮಾರ್ಗವನ್ನು ಸರಾಗ ಮಾಡುವುದು. ದೋಷಿಯು ತನ್ನ ದೋಷದಿಂದಲೇ ಬಿದ್ದು ಹೋಗುವನು. ನಿರ್ದೋಷಿ ಅಂದರೆ ದೇವರ ದೃಷ್ಟಿಯಲ್ಲಿ ದೋಷವಿಲ್ಲದ ಜೀವನ ಮಾಡುವವನು (ಜ್ಞಾನೋ. 11:5). ಆದಿ. 9:6 ರಲ್ಲಿ ನೋಹನ ಚರಿತ್ರೆಯ ನೋಹನು ನೀತಿವಂತನೋ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು., ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು. ನಾವು ತಪ್ಪಿಲ್ಲದ ಜೀವನವನ್ನು ಮಾಡಬೇಕೆಂದು ದೇವರು ಬಯಸುತ್ತಾನೆ. ಆದಿ. 17:1ರಲ್ಲಿ ಅಬ್ರಹಾಮನು ತೊಂಬತ್ತೊಂಬತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನ ಕೊಟ್ಟು **ನಾನು ಸರ್ವಶಕ್ತನಾದ ದೇವರು ನನಗೆ ನಡಕೊಂಡು ದೋಷವಿಲ್ಲದವನಾಗಿರು.** ಅಬ್ರಹಾಮನಿಗೆ 75ನೇ ವಯಸ್ಸಿನಲ್ಲಿ ಕರ್ತನು ಅಸಂಖ್ಯಾತ ಸಂತತಿಯ ಕುರಿತಾದ ವಾಗ್ದಾನವನ್ನು ಕೊಟ್ಟನು ಅಬ್ರಹಾಮನಿಗೆ ತೊಂಬತ್ತೊಂಬತ್ತು ವರುಷ ಪ್ರಾಯವಾದಾಗ ಅವನ ಹೆಂಡತಿಯಾದ ಸಾರಳು ತನ್ನ ದಾಸಿಯಾದ ಹಾಗರಳನ್ನು ಕೂಡಿ ತನಗೆ ಮಕ್ಕಳನ್ನು ಕೊಡು ಎಂದು ಕೇಳಿಕೊಂಡಳು. ಅಬ್ರಹಾಮನು ದುಡುಕಬಾರದಿತ್ತು. ಅವನು ದುಡುಕಿ ತನ್ನ ಹೆಂಡತಿಯಾದ ಸಾರಳ ಮಾತನ್ನು ಕೇಳಿ ಹಾಗರಳ ಜೊತೆ ಶರೀರ ಸಂಬಂಧ ಹೊಂದಿದನು. ಇದು ದೇವರ ದೃಷ್ಟಿಯಲ್ಲಿ ಪಾಪವಾಗಿತ್ತು. ಅಬ್ರಹಾಮನು ದೇವರು ಎಲ್ಲವನ್ನು ಮಾಡಲು ಶಕ್ತನು ಎಂದು ನಂಬಬೇಕಾಗಿತ್ತು. ಈ ಕಾರ್ಯದ ನಂತರವೇ ದೇವರು ಅಬ್ರಹಾಮನಿಗೆ ದರ್ಶನ ಕೊಟ್ಟು ನಾನು ಸರ್ವಶಕ್ತನಾದ ದೇವರು ನನ್ನ ದೃಷ್ಟಿಯಲ್ಲಿ ದೋಷವಿಲ್ಲದವನಾಗಿರು ಎಂದು ಎಚ್ಚರಿಸುವುದನ್ನು ಕಾಣುತ್ತೇವೆ. ಅನೇಕ ಸಾರಿ ನಾವು ಪ್ರಾರ್ಥಿಸಿ, ಪ್ರಾರ್ಥಿಸಿ ಉತ್ತರ ಸಿಗದೇ ಹೋದರೆ ದೇವರ ಮೇಲಿನ ನಂಬಿಕೆ ಕಳಕೊಂಡು ದುಡುಕಿ ತಪ್ಪು ಮಾಡುತ್ತೇವೆ. ಅದರ ಫಲವನ್ನು ನಾವು ಅನುಭವಿಸಬೇಕಾಗುತ್ತದೆ. ಕೊನೆಗೆ ನಂಬಿಕೆಯಿಂದ ಹಿಂಜಾರಿ ಹೋಗುತ್ತೇವೆ. ವಾಕ್ಯ ಹೇಳುತ್ತದೆ, ಜ್ಞಾನೋ. 11:5 **ನಿರ್ದೋಷಿಯ ಧರ್ಮವು ಅವನ ಮಾರ್ಗವನ್ನು ಸರಾಗ ಮಾಡುತ್ತದೆ. ದೋಷಿಯು ತನ್ನ ದೋಷದಿಂದಲೇ ಬಿದ್ದು ಹೋಗುವನು.** ನಮ್ಮ ಜೀವಿತದಲ್ಲಿ ಅನೇಕ ಅಡ್ಡಿಗಳು, ಆಶೀರ್ವಾದದ ತಡೆಗಳು ಇರಬಹುದು. ದೇವರ ದೃಷ್ಟಿಯಲ್ಲಿ ನಾವು ನಿರ್ದೋಷವಾಗಿ ನಡೆಯುವುದಾದರೆ ದೇವರು ನಮ್ಮ ಮಾರ್ಗಗಳನ್ನು ಸರಾಗ ಮಾಡುವನು. ಯೋಸೇಫನ ಚರಿತ್ರೆಯನ್ನು ಓದಿ ತಿಳುಕೊಳ್ಳುವುದಾದರೆ ಆದಿ. 37:1–14 ರಲ್ಲಿ ದೇವರು ಎರಡು ಸಲ ಆತನು ಭವಿಷ್ಯದಲ್ಲಿ ಏನಾಗುತ್ತಾನೆಂದು ತಿಳಿಸಿದನು. ದಾಸತ್ವಕ್ಕೆ ಮಾರಲ್ಪಟ್ಟ ಯೋಸೇಫನೇ ಅವನು. ಅವನ ಕಾಲುಗಳು ಕೋಳದಲ್ಲಿ ನೊಂದವು ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು ಅವನು ತನ್ನ ಮಾತು ನೆರವೇರುವ ತನಕ ಯೆಹೋವನ ವಾಕ್ಯದಿಂದ ಶೋಧಿತನಾದನು. ಪ್ರಿಯರೇ, ನಮ್ಮ ಭೌತಿಕ ಜೀವಿತದಲ್ಲೂ, ಆತ್ಮೀಕ ಜೀವಿತದಲ್ಲೂ ಮುಂದವರೆದಿರಲು ಅನೇಕ ತಡೆಗಳು ಇರಬಹುದು. ದೇವರ ವಾಕ್ಯ ಹೇಳುತ್ತದೆ. ನಿರ್ದೋಷಿಯ ಮಾರ್ಗವನ್ನು ಅವನ ಧರ್ಮವು ಸರಾಗಮಾಡುವುದು. ಜ್ಞಾನೋ. 4:18 **ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ.**

6) ಜ್ಞಾನೋ. 11:6 **ಧರ್ಮವು ಯಥಾರ್ಥವಂತರನ್ನು ಉದ್ಧರಿಸುವುದು. ವಂಚಕರು ತಮ್ಮ ಆಶಾ ಪಾಶಕ್ಕೆ ಸಿಕ್ಕಿ ಬೀಳುವರು.** ಯಥಾರ್ಥವಂತರು ಅಂದರೆ ಯಾರು? ಪ್ರಮಾಣಿಕರು, ವಂಚನೆಯಿಲ್ಲದವರು, ಕಪಟತನವಿಲ್ಲದವರು, ಮೋಸ ಇಲ್ಲದವರು ಇವರೇ ಯಥಾರ್ಥವಂತರಾಗಿದ್ದಾರೆ. ನಮ್ಮ ಧರ್ಮ ನಮ್ಮನ್ನು ಉದ್ಧರಿಸಬೇಕಾದರೆ ನಾವು ಯಥಾರ್ಥವಂತರಾಗಿರಬೇಕು. ದಾನಿ. 6:1–4ರಲ್ಲಿ ದಾನಿಯೇಲನ ಮೇಲಿನ ಹೊಟ್ಟೆಕಿಚ್ಚಿನಿಂದ ಅವನ ಸಹ ಅಧಿಕಾರಿಗಳು ಅವನಲ್ಲಿ ತಪ್ಪು ಹುಡುಕಿ ದಂಡನೆಗೆ ಪಾತ್ರನಾಗಿಸಲು ಪ್ರಯತ್ನ ಮಾಡಿದರು. ತನ್ನ ಹಿಂದೆ ಕೆಲವು ಜನ ಗುಂಪಾಗಿ ತನ್ನ ಕೆಲಸದಲ್ಲಿ ತಪ್ಪನ್ನು ಹುಡುಕುತ್ತಿದ್ದಾರೆ ಈ ವಿಷಯ ದಾನಿಯೇಲನಿಗೆ ಗೊತ್ತಿರಲಿಲ್ಲ. ವಾಕ್ಯ ಹೇಳುತ್ತದೆ, ಅವನು ನಂಬಿಗಸ್ತನಾಗಿದ್ದನು. ದಾನಿ. 6:5–9 **ಈ ದಾನಿಯೇಲನ ಮೇಲೆ ತಪ್ಪು ಹೊರಿಸಲು ಇವನ ದೇವಧರ್ಮದ ಮೂಲಕವೇ ಹೊರತು ಇನ್ನಾವುದರಲ್ಲಿಯೂ ನಮಗೆ ಅವಕಾಶ ದೊರೆಯದು ಅಂದುಕೊಂಡರು. ಹೀಗೆ ಆ ಮುಖ್ಯಾಧಿಕಾರಿಗಳು ದೇಶಾಧಿಪತಿಗಳು ರಾಜನ ಸಮ್ಮುಖದಲ್ಲಿ ನೆರೆದು ಬಂದು ಅವನಿಗೆ ಅರಸನಾದ ದಾರ್ಯವೇಷನೇ ಚಿರಂಜೀವಿಯಾಗಿರು; ಯಾವನಾದರೂ ಮೂವತ್ತು ದಿನಗಳ ತನಕ ರಾಜನಾದ ನಿನಗೆ ಹೊರತು**

ನಾನು ಇಂದಿನಿಂದ ನಿನ್ನನ್ನು ಅವರೆಲ್ಲರ ಮುಂದೆ ಘನಪಡಿಸುವೆನು
(ಯೆಹೋ. 3:7).

**ಬೇರೆ ಯಾವ ದೇವರಿಗಾಗಲಿ ಮನುಷ್ಯನಿಗಾಗಲಿ ವಿಜ್ಞಾಪನೆ ಮಾಡಿಕೊಂಡರೆ ಅವರು ಸಿಂಹಗಳ ಗವಿಯಲ್ಲಿ ಹಾಕಲ್ಪಡಬೇಕು ಎಂಬ ಖಂಡಿತ ನಿಂಬಂಧನೆಯನ್ನು ರಾಜಾಜ್ಞೆ ರೂಪವಾಗಿ ವಿಧಿಸುವುದು ಒಳ್ಳೇದೆಂದು ರಾಜ್ಯದ ಸಕಲ ಮುಖ್ಯಾಧಿಕಾರಿ ನಾಯಕ ದೇಶಾಧಿಪತಿ ಮಂತ್ರಿ ಸಂಸ್ಥಾನಧ್ಯಕ್ಷರು ಆಲೋಚನೆ ಮಾಡಿಕೊಂಡಿದ್ದಾರೆ.** ರಾಜನೇ ಈಗ ನೀನು ಈ ನಿಬಂಧನೆಯನ್ನು ವಿಧಿಸಿ ಇದು ನಿಂತು ಹೋಗದೆ ಮೇದ್ಯಯರ ಮತ್ತು ಪಾರಸಿಯರ ಎಂದಿಗೂ ರದ್ದಾಗದ ಧರ್ಮ ವಿಧಿಗಳ ಪ್ರಕಾರ ಊರ್ಜಿತವಾಗುವಂತೆ ಶಾಸನಕ್ಕೆ ಹಸ್ತಾಕ್ಷರ ಮಾಡು ಎಂದು ಭಿನ್ನವಿಸಲು ರಾಜನಾದ ದರ್ಯಾವೇಷನು ಆ ನಿಬಂಧನಾ ಶಾಸನಕ್ಕೆ ರುಜು ಹಾಕಿದನು. ದಾನಿ. 6:10ರಲ್ಲಿ ಶಾಸನಕ್ಕೆ ರುಜುವಾದದ್ದು ದಾನಿಯೇಲನಿಗೆ ತಿಳಿದಾಗ ಅವನು ತನ್ನ ಮನೆಗೆ ಹೋಗಿ ಯೆರೂಸಲೇಮಿನ ಕಡೆಗೆ ಕದವಿಲ್ಲದ ಕಿಟಕಿಗಳುಳ್ಳ ತನ್ನ ಮಹಡಿಯ ಕೋಣೆಯಲ್ಲಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆ ಮಾಡಿ ಸ್ತೋತ್ರ ಸಲ್ಲಿಸಿದನು. ವಚನ ಹೇಳುತ್ತದೆ, ದಾನಿಯೇಲನಿಗೆ ಶಾಸನಕ್ಕೆ ರುಜುವಾದ ವಿಷಯ ಗೊತ್ತಾಗಿದೆ ಮತ್ತು ಅದನ್ನು ಉಲ್ಲಂಘಿಸಿದರೆ ಎಂಥ ಶಿಕ್ಷೆ ಎಂದು ಅವನಿಗೆ ಗೊತ್ತಿತ್ತು. ಆದರೂ ಅವನು ಅತ್ತಕಡೆ ರಾಜನಿಗೆ ಆರಾಧಿಸಿ ಇತ್ತ ರಹಸ್ಯವಾಗಿ ದೇವರಿಗೆ ಆರಾಧನೆ ಮಾಡಲಿಲ್ಲ. ಇದು ದಾನಿಯೇಲನ ಯಥಾರ್ಥ ಆರಾಧನೆ ಮತ್ತು ಪ್ರಾರ್ಥನೆಯಾಗಿತ್ತು ಆತನು ರಾಜನ, ಜನರ ಮತ್ತು ದೇವರ ಮುಂದೆ ನಾಟಕ ಮಾಡಲಿಲ್ಲ. ತನ್ನ ಯತಾರ್ಥ ನಂಬಿಕೆಯನ್ನು ಬಿಡಲಿಲ್ಲ. ಇದರ ಪರಿಣಾಮ ಏನು ಎಂದು ಕೂಡ ಅವನು ತಿಳಿದಿದ್ದನು. ಇಂದಿನ ಕ್ರೈಸ್ತ ವಿಶ್ವಾಸಿಗಳಾದರೆ ಅತ್ತ ರಾಜನನ್ನು ಆರಾಧಿಸಿ ಮೆಚ್ಚಿಸುತ್ತಿದ್ದರು. ಇತ್ತ ರಹಸ್ಯವಾಗಿ ದೇವರನ್ನು ಆರಾಧಿಸುತ್ತಿದ್ದರು. ಆದರೆ ಇಲ್ಲಿ ದಾನಿಯೇನು ದೇವರ ದೃಷ್ಟಿಯಲ್ಲಿ ಯಥಾರ್ಥನಾಗಿ ರುವುದನ್ನು ಕಾಣಬಹುದು. ಇದರಿಂದ ಹಸಿದ ಸಿಂಹದ ಗವಿಗಳ ಒಳಗೆ ಹಾಕಲ್ಪಟ್ಟನು. ದಾನಿ. 6:16 ರಲ್ಲಿ ಕೊನೆಗೆ ಏನಾಯಿತು ದಾನಿಯೇಲನನ್ನು ಸಿಂಹಗಳು ಏನು ಮಾಡಲು ಸಾಧ್ಯವಾಗಲಿಲ್ಲ. ದಾನಿ. 6:19–22 ರಾಜನು ದಾನಿಯೇಲನನ್ನು ಸಿಂಹದ ಗವಿಗಳೊಳಗಿಂದ ಮೇಲಕ್ಕೆತ್ತಿ ದಾನಿಯೇಲನ ವಿರೋಧಿಗಳನ್ನೇ ಕುಟುಂಬ ಸಮೇತವಾಗಿ ಹಾಕಿದನು. ಸಿಂಹಗಳು ಅವರನ್ನು ಚೂರು ಚೂರು ಮಾಡಿ ತಿಂದು ಹಾಕುವುದನ್ನು ನಾವು ಕಾಣಬಹುದು. ದಾನಿ. 6:23–24, ದಾನಿ. 2:28 ಈ ದಾನಿಯೇಲನು ದರ್ಯಾವೇಷನ ಆಳ್ವಿಕೆಯಲ್ಲಿಯೂ ಪಾರಸಿಯನಾದ ಕೋರೇಷನ ಆಳ್ವಿಕೆಯಲ್ಲಿಯೂ ಘನವಂತನಾಗಿ ಬಾಳಿದನು.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**


## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**


ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ (ರೋಮ. 12:11).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಐಗುಪ್ತರ ದಾಸತ್ವದಿಂದ ಬಿಡುಗಡೆ ಮಾಡಲು** (ಲೋಕದ, ಪಾಪದ, ಧರ್ಮದ ಬಿಡುಗಡೆಗೆ ಗುರುತು) ವಿಮೋ. 3:7–8 ಆಗ ಯೆಹೋವನು ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೆ ನೋಡಿದ್ದೇನೆ. ಬಿಟ್ಟೀ ಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ ಕೇಳಿಸಿತು. ಅವರ ದು:ಖವನ್ನೆಲ್ಲಾ ನಾನು ಬಲ್ಲೆನು ಆದಕಾರಣ ಅವರನ್ನು ಐಗುಪ್ತ್ಯರ ಕೈಯಿಂದ ತಪ್ಪಿಸುವುದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ವಿಸ್ತಾರವಾದ ಒಳ್ಳೇ ದೇಶಕ್ಕೆ.

4) **ಹಾಲೂ ಜೇನು ಹರಿಯುವ ಕಾನಾನ್ ದೇಶಕ್ಕೆ ನಡೆಸಲು** (ಇದು ಪರಲೋಕದ ಕಾನಾನಿಗೆ ಗುರುತು ನಿತ್ಯ ಜೀವಿತಕ್ಕೆ ಗುರುತು) ವಿಮೋ. 3:8 ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳಗಿಂದ ತಪ್ಪಿಸುವುದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ವಿಸ್ತಾರವಾದ ಒಳ್ಳೇ ದೇಶಕ್ಕೆ ಅಂದರೆ ಕಾನಾನ್ಯರೂ ಹಿತ್ತೀಯರೂ ಅವೋರಿಯರೂ ಪೆರೀಜಿಯರು ಹಿವ್ವಿಯರೂ ಯೆಬೂಸಿಯರು ವಾಸವಾಗಿರುವ ದೇಶಕ್ಕೆ ನಡಿಸಿಕೊಂಡು ಹೋಗುವುದಕ್ಕೂ ಇಳಿದು ಬಂದಿದ್ದೇನೆ.

5) **ಸತ್ಯದೇವರನ್ನು ಆರಾಧಿಸಲು** (ಆತ್ಮದ ಸತ್ಯದ ಆರಾಧನೆಗೆ ಗುರುತು) ವಿಮೋ. 3:12 ಅದಕ್ಕೆ ದೇವರು ನಾನೇ ನಿನ್ನ ಸಂಗಡ ಇರುವೆನು ಮತ್ತು ನೀನು ನನ್ನ ಜನರನ್ನು ಐಗುಪ್ತ ದೇಶದಿಂದ ಹೊರಗೆ ತಂದಾಗ ನೀವು ಈ ಬೆಟ್ಟದಲ್ಲೇ ದೇವರನ್ನು ಆರಾಧಿಸುವಿರಿ ನಿನ್ನನ್ನು ಕಳುಹಿಸಿದವನು ನಾನೇ ಎಂಬುದಕ್ಕೆ ಇದೇ ನಿನಗೆ ಗುರುತಾಗಿರುವುದು ಅಂದನು (ವಿಮೋ. 7:16).

6) **ಸತ್ಯದೇವರನ್ನು ತಿಳಿದುಕೊಳ್ಳಲು** (ಕರ್ತನಾದ ಯೇಸುಕ್ರಿಸ್ತನು ರಕ್ಷಕನೆಂದು ತಿಳಿದು ರಕ್ಷಣೆಹೊಂದಲು ಗುರುತು) ವಿಮೋ. 3::13–14 ಮೋಶೆ ದೇವರಿಗೆ ನಾನು ಇಸ್ರಾಯೇಲ್ಯರ ಬಳಿಗೆ ಬಂದು ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಒಂದು ವೇಳೆ ಅವರು ಆತನ ಹೆಸರೇನೆಂದು ನನ್ನನ್ನು ಕೇಳಿದರೆ ನಾನೇನು ಉತ್ತರ ಕೊಡಬೇಕು ಎನ್ನಲು ದೇವರು ಅವನಿಗೆ ಇರುವಾತನೇ ಆಗಿದ್ದೇನೆ ನೀನು ಇಸ್ರಾಯೇಲರಿಗೆ ಇರುವಾತನೆಂಬವುದು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು

7) **ದೇವರಿಗೆ ಯಜ್ಞವನ್ನರ್ಪಿಸಲು** (ಇದು ವಿವಿಧ ಕೊಡುವಿಕೆಗೆ ಗುರುತು) ವಿಮೋ. 3:18 ಅವರು ನಿನ್ನ ಮಾತಿಗೆ ಕಿವಿಗೊಡುವರು ನೀನೂ ಇಸ್ರಾಯೇಲ್ಯರ ಹಿರಿಯರೂ ಐಗುಪ್ತ ದೇಶದ ಅರಸನ ಬಳಿಗೆ ಹೋಗಿ ಅವನಿಗೆ ಇಬ್ರಿಯರ ದೇವರಾಗಿರುವ ಯೆಹೋವನು ನಮಗೆ ಪ್ರತ್ಯಕ್ಷನಾದನು ಆದುದರಿಂದ ನಾವು ಅರಣ್ಯದಲ್ಲಿ ಮೂರು ದಿನದ ಪ್ರಯಾಣದಷ್ಟು ದೂರಹೋಗಿ ನಮ್ಮ ದೇವರಾದ ಯೆಹೋವನಿಗೋಸ್ಕರ ಯಜ್ಞಮಾಡಬೇಕಾಗಿದೆ.

**ಇಸ್ರಾಯೇಲರು 6 ವಿಧವಾದ ಯಜ್ಞಗಳನ್ನು ಮಾಡಬೇಕಾಗಿತ್ತು** (ಯಾಜಕ. 7:37).

1. ಸರ್ವಾಂಗ ಹೋಮ 2. ಧಾನ್ಯನೈವೇದ್ಯ

3. ದೋಷಪರಿಹಾರಕ ಯಜ್ಞ 4) ಪ್ರಾಯಶ್ಚಿತ್ತಯಜ್ಞ 5. ಯಾಜಕ ಪ್ರತಿಷ್ಠೆ ಯಜ್ಞ 6. ಸಮಾಧಾನ ಯಜ್ಞ.

**ಹೊಸ ಒಡಂಬಡಿಕೆಯ ಆತ್ಮೀಕ ಯಜ್ಞಗಳು**

1. ನ್ಯಾಯವಾದ ಯಜ್ಞ (ಕೀರ್ತ. 4:5).
2. ಸ್ತುತಿಯಜ್ಞ (ಕೀರ್ತ. 50:14, ಹೋಶೆ. 14:2).
3. ನಂಬಿಕೆಯೆಂಬ ಯಜ್ಞ (ಫಿಲಿ. 2:17).
4. ಅನ್ಯಜನರೆಂಬ ಕಾಣಿಕೆಯೆಂಬ ಯಜ್ಞ (ಅನ್ಯರನ್ನು ರಕ್ಷಣೆಗೆ ನಡೆಸುವುದು).
5. ಚದುರಿರುವವರನ್ನು ಕೂಡಿಸುವ ಯಜ್ಞ (ಐಕ್ಯತೆಗೆ ನಡೆಸುವುದು) (ಯೆಶಾ. 66:20).
6. ನಮ್ಮನ್ನೇ ಪಾನದ್ರವ್ಯವಾಗಿ ಸಮರ್ಪಿಸುವ ಯಜ್ಞ (2 ತಿಮೊ. 4:6).
7. ಸಜೀವ ಯಜ್ಞ (ರೋಮ. 12:1–2).
8. ಆತನೇ ಕರ್ತನೆಂದು ಒಪ್ಪಿಕೊಳ್ಳುವುದು (ಇಬ್ರಿ.13:15).
9. ಧರ್ಮವೆಂಬ ಯಜ್ಞ (ಇಬ್ರಿ. 13:16).
10. ಪರೋಪಕಾರವೆಂಬ ಯಜ್ಞ (ಇಬ್ರಿ. 13:16).
11. ಆತನಿಗೆ ಸಮರ್ಪಕವಾದ ಯಜ್ಞ (ಇಬ್ರಿ. 13:21).
12. ಸಕಲ ಆತ್ಮೀಯ ಯಜ್ಞ (1 ಪೇತ್ರ,. 2:1–5).

8) **ದೇವರ ಸೇವೆ ಮಾಡಲು** :– ವಿಮೋ. 4:23 (ಮೂಲ ಭಾಷೆಯಲ್ಲಿ ಸೇವೆ ಎಂದಿದೆ) ನನ್ನ ಮಗನು ನಿನ್ನ ದೇಶದಿಂದ ಹೊರಟು ನನ್ನನ್ನು ಆರಾಧಿಸುವುದಕ್ಕೆ ಅವನಿಗೆ ಅಪ್ಪಣೆ ಕೊಡಬೇಕು. ಅದಕ್ಕೆ ನೀನು ಒಪ್ಪದೇ ಹೋದರೆ ನಾನು ನಿನಗಿರುವ ಚೊಚ್ಚಲ ಮಗನನ್ನು ಸಾಯಿಸುವೆನೆಂದು ಯೆಹೋವನು ಹೇಳುತ್ತಾನೆಂದು ತಿಳಿಸಬೇಕು. (ಸೇವೆ ಬಗ್ಗೆ ಮುಂದಿನ ಪುಟಗಳಲ್ಲಿ ವಿವರಿಸುತ್ತೇನೆ)

9) **ಕರ್ತನಿಗೆ ಜಾತ್ರೆ ನಡೆಸಲು** :– ವಿಮೋ. 5:1 ಬಳಿಕ ಬೇರೆ

ಯೆಹೀವನೇ, ನನ್ನ ಕಾಲು ಜಾರಿತೆಂದು ಅಂದಾಗಲೇ ನಿನ್ನ ಕೃಪೆಯು ನನಗೆ ಆಧಾರವಾಯಿತು.
(ಕೀರ್ತ. 94:18).

ಆರೋನರು ಫರೋಹನ ಸನ್ನಿಧಿಗೆ ಹೋಗಿ ಇಸ್ರಾಯೇಲರ ದೇವರಾದ ಯೆಹೋವನು ನನ್ನ ಜನರು ನನಗಾಗಿ ಅರಣ್ಯದೊಳಗೆ ಜಾತ್ರೆ ನಡೆಸುವಂತೆ ಅವರಿಗೆ ಅಪ್ಪಣೆ ಕೊಡಬೇಕೆಂದು ಹೇಳಿದ್ದಾನೆ ಅಂದರು.

ದೇವರು ಇಸ್ರಾಯೇಲರಿಗೆ 7 ವಿಧವಾದ ಜಾತ್ರೆಗಳನ್ನು ನಡೆಸಲು ಹೇಳಿದನು ಅದರಲ್ಲಿ ಅನೇಕ ಉದ್ದೇಶಗಳಿದ್ದವು.

1. ಆತ್ಮೀಕವಾದ ಅರ್ಥವಿತ್ತು.
2. ಐತಿಹಾಸಿಕ ನೆನಪುಗಳಿದ್ದವು
3. ದೇವರನ್ನು ಆರಾಧಿಸಿ ಸಮಯ ಕಳೆಯುತ್ತಿದ್ದರು (ಯಾಕ. 23:1–2–4).
4. ಹಬ್ಬಗಳನ್ನು ಕೆಲವು ನಿಬಂಧನೆಗಳನ್ನು ಅನುಸರಿಸಬೇಕಾಗಿತ್ತು.
5. ಹಬ್ಬಗಳಲ್ಲಿ ಕೆಲವು ಕ್ರಮಗಳನ್ನು ಅನುಸರಿಸಬೇಕಾಗಿತ್ತು.
6. ಹಬ್ಬಗಳು ದೇವಜನರಿಗೆ ಸಂತೋಷ ತರುವಂತವಾಗಿದ್ದವು.

1. ಪಸ್ಕ ಹಬ್ಬ (ಯಾಜಕ. 23:5).
2. ಹುಳಿ ಇಲ್ಲದ ರೊಟ್ಟಿ ಹಬ್ಬ (ಯಾಜಕ. 23:6–8).
3. ಪ್ರಥಮ ಫಲದ ಸಿವುಡಿನ ಹಬ್ಬ (ಯಾಜ. 23:9–15).
4. ಪಂಚಶತ್ತಮ ಹಬ್ಬ (ಯಾಜ. 23:15–21).
5. ತುತ್ತೂರಿ ಹಬ್ಬ (ಯಾಜ. 23:23–25).
6. ಸರ್ವದೋಷ ಪರಿಹಾರಕ ಹಬ್ಬ (ಯಾಜ.23:26–32)
7. ವರ್ಣಶಾಲೆಯ ಜಾತ್ರೆಯ ಹಬ್ಬ (ಯಾಜ. 23:33–36)

**ಈಗ ಈ ಹಬ್ಬಗಳನ್ನು ನಾವು ಮಾಡಬೇಕಾಗಿಲ್ಲ. ಈ ಹಬ್ಬಗಳ ಆತ್ಮೀಕ ಅರ್ಥಗಳನ್ನು ನಾವು ಧ್ಯಾನಿಸೋಣ:**

1. ಪಸ್ಕಹಬ್ಬ – ಯೇಸುವಿನ ಶಿಲುಬೆ ಮರಣಕ್ಕೆ ಗುರುತು (1 ಕೊರಿ. 5:6–8).
2. ಹುಳಿ ಇಲ್ಲದ ರೊಟ್ಟಿ ಹಬ್ಬ – ಪಾಪ ಇಲ್ಲದೆ ಕರ್ತನ ಭೋಜನದಲ್ಲಿ ಪಾಲುಗಾರರಾಗುವುದನ್ನು ಸೂಚಿಸುತ್ತದೆ (1 ಕೊರಿ. 5:6–8).
3. **ಪ್ರಥಮ ಫಲದ ಸಿವುಡಿನ ಹಬ್ಬ** :– 1. ಯೇಸು ಪ್ರಥಮ ಫಲವಾಗಿ ಸತ್ತವರೊಳಗಿಂದ ಪುನರುತ್ಥಾನನಾಗಿ ಏಳುವುದಕ್ಕೆ ಗುರುತು.
2. ರಕ್ಷಣೆ ಹೊಂದಿದ ನಾವು ದೇವರಿಗೆ ಪ್ರಥಮಫಲ.
4) **ಪಂಚಶತ್ತಮ ಹಬ್ಬ** :–ಯಾಜ, 25:1 ಕರ್ತನಾದ ಯೇಸುಕ್ರಿಸ್ತನು ಸತ್ತು ಹೂಣಲ್ಪಟ್ಟು 3ನೇ ದಿನದಲ್ಲಿ ಎದ್ದು ಬಂದ ನಂತರ 40 ದಿವಸ ಈ ಲೋಕದಲ್ಲಿ ಕಾಣಿಸಿಕೊಂಡು ಪರಲೋಕಕ್ಕೆ ಅರೋಹಣನಾಗಿ 10ನೇ ದಿನ ಅಂದರೆ ಸತ್ತವರೊಳಗಿಂದ ಎದ್ದು ಬಂದು 50ನೇ ದಿನ ಪರಿಶುದ್ಧಾತ್ಮನನ್ನು ಕಳುಹಿಸಿದನು. ಇದು ಎಲ್ಲಾ ಬಂಧನಗಳ (ದಾಸತ್ವದ ಬಿಡುಗಡೆಗೆ ಗುರುತು).
5) **ಸರ್ವದೋಷಪರಿಹಾರಕ ಹಬ್ಬ** :– ಕರ್ತನಾದ ಯೇಸುಕ್ರಿಸ್ತನು ಶಿಲುಬೆಯಲ್ಲಿ ಸುರಿಸಿದ ರಕ್ತದ ಮೂಲಕ ನಮಗೆ ಪರಿಪೂರ್ಣ ಪಾಪದಿಂದ ಬಿಡುಗಡೆ ಸಿಕ್ಕಿದಕ್ಕೆ ಗುರುತು (1 ಯೋಹಾ. 1:7).
6) **ತುತ್ತೂರಿ ಹಬ್ಬ** :– (1 ಥೆಸ. 4:13–18) ಯೇಸುಕ್ರಿಸ್ತನ ರಹಸ್ಯ ಬರೋಣಕ್ಕೆ ಗುರುತು
7. **ಪರ್ಣಶಾಲೆ ಜಾತ್ರೆ ಹಬ್ಬ** – ಕರ್ತನಾದ ಯೇಸುಕ್ರಿಸ್ತನ ರಹಸ್ಯ ಬರೋಣದಲ್ಲಿ ಸಭೆ ಪರಲೋಕಕ್ಕೆ ಎತ್ತಲ್ಪಟ್ಟು ಪರಲೋಕದಲ್ಲಿ 7 ವರ್ಷಗಳು ಇರುವುದಕ್ಕೆ ಗುರುತು..
10. ಕರ್ತನ ಮಾತನ್ನು ಶ್ರದ್ಧೆಯಿಂದ ಕೇಳಲು (ವಿಮೋ.19:3–6).
11) ಕರ್ತನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆಯಲು (ವಿಮೋ. 19:3–6).
12) ಕರ್ತನಿಗೆ ಯಾಜಕ ರಾಜ್ಯವಾಗಲು (ವಿಮೋ. 19:3–6).
13) ಕರ್ತನಿಗೆ ಪರಿಶುದ್ಧ ಜನರಾಗಲು (ವಿಮೋ. 19:3–6).
14) ಕರ್ತನಿಗೆ ಸ್ವಕೀಯ ಜನರಾಗಲು (ಧರ್ಮೋ. 4:20, 7:6).
15) ಅನ್ಯಜನರ ದುರ್ನಡತೆಯ ದೆಸೆಯಿಂದ (ಧರ್ಮೋ. 9:4–5). ನಿಮ್ಮ ದೇವರಾದ ಯೆಹೋವನು ಅವರನ್ನು ನಿಮ್ಮ ಎದುರಿನಿಂದ ಹೊರಡಿಸಿದ ನಂತರ ನೀವು ಮನಸ್ಸಿನಲ್ಲಿ ಯೆಹೋವನು ನಮ್ಮನ್ನು ಈ ದೇಶಕ್ಕೆ ಕರೆತಂದು ಅದನ್ನು ನಮಗೆ ಸ್ವಾಧೀನಪಡಿಸಿದ್ದು ನಮ್ಮ ಪುಣ್ಯ ಫಲವೇ ಅಂದುಕೊಳ್ಳಬಾರದು ಆ ಜನರ ದುರ್ನಡತೆಯ ದೆಸೆಯಿಂದಲೇ ಯೆಹೋವನು ನಿಮ್ಮ ಎದುರಿನಿಂದ ಅವರನ್ನು ಹೊರಡಿಸುತ್ತಾನೆ. ನೀವು ಅವರ ದೇಶಕ್ಕೆ ಬಂದು ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ನಿಮ್ಮ ಪುಣ್ಯ ಫಲವೇ ಆಗಲಿ, ನಿಮ್ಮ ಸುಸ್ವಭಾವವೇ ಆಗಲಿ ಕಾರಣವಲ್ಲ ಆ ಜನಾಂಗಗಳ ದುರ್ನಡತೆಯ ದೆಸೆಯಿಂದಲೂ ನಿಮ್ಮ ದೇವರಾದ ಯೆಹೋವನು ನಿಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರಿಗೆ ಪೂರ್ಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ನೆರವೇರಿಸಬೇಕೆಂದಿದ್ದರಿಂದಲೂ ಅವರನ್ನು ನಿಮ್ಮ ಎದುರಿನಿಂದ ಹೊರಡಿಸಿ ಬಿಡುತ್ತಾನೆ.

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

**ಯೆಹೋವನು ನಿಮಗೆ ಕೃಪೆತೋರಿಸಬೇಕೆಂದು ಕಾದಿರುವನು; ನಿಮ್ಮನ್ನು ಕರುಣಿಸಬೇಕೆಂದು ಉನ್ನತೋನ್ನತವಾಗಿ ಕಾಣಿಸಿಕೊಳ್ಳುವನು. (ಯೆಶಾ. 30:18)**

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಅಖಂಡ ಆಂಧ್ರಕ್ಕಾಗಿ ಹೋರಾಡಿದೆ ಆಂಧ್ರಪ್ರದೇಶ ಸಿಎಂ ಕಿರಣ್‌ಕುಮಾರ್ ರೆಡ್ಡಿ ಮತ್ತು ಸೀಮಾಂಧ್ರ ಭಾಗದ ಜನರ ಬೇಡಿಕೆಯನ್ನು ಬದಿಗೊತ್ತಿರುವ ಕೇಂದ್ರ ಸರಕಾರವು ಕಡೆಗೂ ಆಂಧ್ರಪ್ರದೇಶವನ್ನು ವಿಭಜಿಸಿ ಪ್ರತ್ಯೇಕ ತೆಲಂಗಾಣ ರಾಜ್ಯ ರಚಿಸುವ ನಿರ್ಧಾರ ಕೈಗೊಂಡಿದೆ.

* ದಕ್ಷಿಣ ಭಾರತದ ಪ್ರಮುಖ ಆಹಾರ ಉತ್ಪನ್ನವಾದ ಅಕ್ಕಿ ಮತ್ತು ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯನ್ನು ಸೇವಾ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಕೇಂದ್ರ ವಿತ್ತ ಖಾತೆಯ ವಿವಾದಾತ್ಮಕ ಸುತ್ತೋಲೆ ಹೊರಡಿಸಿದೆ. ಇದರಿಂದಾಗಿ ಅಕ್ಕಿ ಮತ್ತು ಹತ್ತಿ ಮೇಲೆ ಕೇಂದ್ರ ಸರ್ಕಾರವು ಗದಾಪ್ರಹಾರ ಮಾಡಿದಂತಾಗಿದ್ದು, ಇವುಗಳ ಬೆಲೆ ಭಾರೀ ಪ್ರಮಾಣದಲ್ಲಿ ಏರುವ ಆತಂಕ ಎದುರಾಗಿದೆ.

* ಈ ವರ್ಷ ದೇಶದ ಆಹಾರಧಾನ್ಯ ಉತ್ಪಾದನೆ 263.2 ಮೆಟ್ರಿಕ್ ಟನ್ ಮುಟ್ಟುವ ಎಲ್ಲಾ ಸಾಧ್ಯತೆಗಳಿವೆ ಎಂದು ಕೇಂದ್ರ ಕೃಷಿ ಸಚಿವ ಶರದ್ ಪವಾರ್ ತಿಳಿಸಿದ್ದಾರೆ. ಕಳೆದ ವರ್ಷದ ಜೂನ್-ಜುಲೈ ಅವಧಿಯಲ್ಲಿ ಭಾರತದ ಆಹಾರಧಾನ್ಯ ಉತ್ಪಾದನೆ 255.36 ಮೆಟ್ರಿಕ್ ಟನ್‌ಗೆ ಕುಸಿದಿತ್ತು. ದೇಶದ ಹಲವು ಭಾಗಗಳಲ್ಲಿ ಬರ ಕಾಣಿಸಿಕೊಂಡಿದ್ದೇ ಉತ್ಪಾದನೆ ಕುಸಿತಕ್ಕೆ ಕಾರಣ.

* ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳ ನೆರವಿಗೆ ಆಗಮಿಸಿರುವ ರಾಜ್ಯ ಸರ್ಕಾರ ಇವರ ಮಾಸಿಕ ಗೌರವಧನದ ಮೊತ್ತವನ್ನು 3 ಸಾವಿರದಿಂದ 5 ಸಾವಿರ ರೂಪಾಯಿಗೆ ಹೆಚ್ಚಿಸುವುದರ ಜತೆ ಪಿಂಚಣಿ ಸೌಲಭ್ಯವನ್ನೂ ಕಲ್ಪಿಸಲು ಆದೇಶ ಹೊರಡಿಸಿದೆ.

* ಮಕ್ಕಳನ್ನು 'ದಾನ' ನೀಡುವ ಯಾವುದೇ ಪ್ರಕ್ರಿಯೆ ಕಾನೂನಿನಲ್ಲಿ ಇಲ್ಲ. ಹಾಗೊಂದು ವೇಳೆ ಮಕ್ಕಳನ್ನು ಒಬ್ಬರು ಮತ್ತೊಬ್ಬರಿಂದ ಪಡೆಯುವುದೇ ಆದಲ್ಲಿ ಕಾನೂನು ಮಾನ್ಯ ಮಾಡಿರುವ 'ದತ್ತು' ಕಾಯ್ದೆಯ ಅನ್ವಯವೇ ಪಡೆಯಬೇಕು. ಅದೂ ಸರ್ಕಾರ ಮಾನ್ಯತೆ ನೀಡಿರುವ ದತ್ತು ಕೊಡು-ಪಡೆಯುವ ಏಜೆನ್ಸಿ ಮೂಲಕವೇ ಈ ಪ್ರಕ್ರಿಯೆ ನಡೆಯಬೇಕು. ಹಾಗೊಂದು ವೇಳೆ ದಾನ ನೀಡಿದ್ದೇ ಆದಲ್ಲಿ ಅದು ಕ್ರಿಮಿನಲ್ ಅಪರಾಧವೆನಿಸಿಕೊಳ್ಳುತ್ತದೆ.

## ಡಿಜಿಎಮ್ ಬೇತೇಲ್ ಅಂಕಣ

- ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಬಾಲರಾಜ್‌ರವರು ಮರಳಿ ಕುಟುಂಬಕ್ಕೆ ಸೇರಿದ್ದಾರೆ.
- 2014 ಫೆಬ್ರವರಿ 24ರಿಂದ 2014 ಮಾರ್ಚ್ 5ರವರೆಗೆ 3ನೇ ಕೆರೀತ್ ಬಿಡುಗಡೆಯ ಕೂಟಗಳು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುತ್ತದೆ. ಆಸಕ್ತಿಯುಳ್ಳವರು ಈ ಕೂಟದಲ್ಲಿ ಭಾಗವಹಿಸಿ ದೇವರಿಂದ ಆಶೀರ್ವಾದವನ್ನು ಹೊಂದಿಕೊಳ್ಳಬಹುದು.
- ಡಿಜಿಎಮ್ ಬೇತೇಲ್ ಚರ್ಚ್‌ನ ಸಭೆಯ ವಿಶ್ವಾಸಿಯಾದ ಹಾಗೂ ಹಿರಿಯರಾದ ಸರ್ವೋತ್ತಮ ಮಾಬೆನ್‌ರವರು ದಿನಾಂಕ. 29.01.2014ರಂದು ಕರ್ತನಲ್ಲಿ ನಿದ್ರೆ ಹೋಗಿರುತ್ತಾರೆ.

**ಆಶ್ರಮದ ಅವಶ್ಯಕತೆಗಳು**

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು.
(1ಪೇತ್ರ. 5:12).

## ಜಾಹಿರಾತು


# ಬೇಕಾಗಿದ್ದಾರೆ

**ಕ್ರೈಸ್ತ ಸಂಸ್ಥೆಗೆ ಅನುಭವವಿರುವಂತಹ ವಾಚಮೆನ್(ಕಾವಲುದಾರರು) ಬೇಕಾಗಿದ್ದಾರೆ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**9902334941, 9964070654, 0820–2002781.**

# ಬೇಕಾಗಿದ್ದಾರೆ

**ಗಂಡು ಮಕ್ಕಳ ವಸತಿ ನಿಲಯಕ್ಕೆ ಅನುಭವವಿರುವ ವಾರ್ಡನ್ ಬೇಕಾಗಿದ್ದಾರೆ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**9902334941, 9964070654, 0820–2002781.**

**ನಿಮಗೆ ದೇವರ ವಾಕ್ಯದ ಟಿ–ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**9902334941, 08202002781, 9844265602.**


ನಿನ್ನ ಕೃಪೆಯಿಂದ ಸಂವತ್ಸರಕ್ಕೆ ಸುಭಿಕ್ಷ ಕಿರೀಟವನ್ನು ಇಟ್ಟಿದ್ದೀ;

(ಕೀರ್ತ. 65:11).

**ಆದಿಕಾಂಡ ಪುಸ್ತಕದಿಂದ ಆಯ್ದುಕೊಂಡ ಪದಗಳು :**

ಮಕ್ಕಳ ಸ್ವರ

1) "ಸೀಟ್ನಾ" ಅಂದರೆ ಏನು?
2) "ರೆಹೋಬೋತ್" ಅಂದರೆ ಅರ್ಥವೇನು ?
3) "ಯಾಕೋಬ" ಎಂಬ ಹೆಸರಿನ ಅರ್ಥವೇನು?
4) "ಬೇತೇಲ್" ಅಂದರೆ ಅರ್ಥವೇನು ?
5) "ರೂಬೇನ್" ಹೆಸರಿನ ಅರ್ಥವೇನು ?
6) "ಸಿಮೆಯೋನ್" ಹೆಸರಿನ ಅರ್ಥವೇನು ?
7) "ಲೇವಿ" ಹೆಸರಿನ ಅರ್ಥವೇನು ?
8) "ಯೆಹೂದಾ" ಹೆಸರಿನ ಅರ್ಥವೇನು ?
9) ಯಾಕೋಬನ ಹೆಂಡತಿಯಾದ ಲೇಯಳ ದಾಸಿಯ ಹೆಸರೇನು ?
10) ಯಾಕೋಬನ ಹೆಂಡತಿಯಾದ ರಾಹೇಲಳ ದಾಸಿಯ ಹೆಸರೇನು ?

---

**ಫೆಬ್ರವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1. ಒಬ್ಬರೂ ಇರಲಿಲ್ಲ (ಆದಿ. 18:16–33).
2. ತಂದೆಯಿಂದ ಉಂಟಾದವನು (ಆದಿ. 19:37).
3. ರಕ್ತಸಂಬಂಧಿಕನ ಮಗ (ಆದಿ. 19:38).
4. ಪ್ರಮಾಣದ ಬಾವಿ (ಆದಿ. 21:31).
5. ಯೆಹೋವನು ಒದಗಿಸುವನು (ಆದಿ. 22:14).
6. ಮೆಸೊಪೊತಾಮ್ಯ/ಮೆಸಪೊಟೊಮಿಯ (ಆದಿ. 24:10).
7. ಪೂರ್ವ (ಆದಿ. 25:6).
8. ಎದೋಮ್(ಆದಿ. 25:30).
9. ಕೆಂಪು (ಆದಿ. 25:30).
10. ಜಗಳ (ಆದಿ. 26:20.

---

**ಭಕ್ತರ ಹೇಳಿಕೆಗಳು:**

* ನಿಜವಾದ ಪ್ರಸಂಗವು ರಕ್ತದ ಬೆವರ ಹನಿಯಾಗಿರಬೇಕು. ಡಾ॥ ಜೋಸೆಫ್ ಪಾರ್ಕರ್.
* ರಾಬರ್ಟ್‌ಮುರ್ರೆ ಎಂಬ ದೇವ ಮನುಷ್ಯನು ಹೇಳುತ್ತಾನೆ, "ಪರಿಶುದ್ಧನಾದ ಒಬ್ಬ ದೇವರ ಸೇವಕನು, ಕರ್ತನಾದ ದೇವರ ಹಸ್ತದಲ್ಲಿರುವ ಶ್ರೇಷ್ಟವಾದ ಆಯುಧ" ಎಂಬುದಾಗಿ.
* ವ್ಯಾನ್ಸ್ ಹ್ಯಾವ್ನೆರ್‌ರವರ ಹೇಳಿಕೆ :– ನಾವು ಆಗಾಗ್ಗೆ ಕೇಳುವಂತೆ ಒಬ್ಬ ಮಿಷನರಿಗೆ ಬೇಕಾದ ಅರ್ಹತೆ ಮೊದಲು ಆತ್ಮಗಳ ಮೇಲಿನ ಪ್ರೀತಿಯಲ್ಲ, ಬದಲಾಗಿ ಕ್ರಿಸ್ತನ ಮೇಲಿನ ಪ್ರೀತಿ.
* ಆರ್. ಸ್ಟ್ಯಾನ್ಲಿಯವರ ಹೇಳಿಕೆ :– ಪ್ರವಾದಿಗಳಿಗೆ ಭಾರವು ಮತ್ತು ಕಣ್ಣೀರು ಇತ್ತೇ ಹೊರತು ಪ್ರಸಂಗವಿರಲಿಲ್ಲ.

**ನನ್ನ ಆತ್ಮವು ನಿನ್ನನ್ನು ಅಂಟಿಕೊಂಡು ಹಿಂಬಾಲಿಸಿರುವದು; ನಿನ್ನ ಬಲಗೈ ನನಗೆ ಆಧಾರವಾಗಿರುವದು.**
**(ಕೀರ್ತ. 63:8).**